ಸಂಪುಟ 01 | ಸಂಚಿಕೆ 142 | ಮಂಗಳವಾರ 14 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008786587 naijyadese@gmail.com

## ಈ ದಿನದ ವಿಶೇಷ

**1) ಬಿ.ಆರ್. ಅಂಬೇಡ್ಕರ್ ಜಯಂತಿ**

ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನವಾದ ಏಪ್ರಿಲ್ 14 ಅನ್ನು ಪ್ರತಿವರ್ಷ ಅಂಬೇಡ್ಕರ್ ಜಯಂತಿ ಎಂದು ಆಚರಿಸಲಾಗುತ್ತದೆ. ಭಾರತದ ಸಂವಿಧಾನ ಶಿಲ್ಪಿ, ಸಮಾಜ ಸುಧಾರಕ ಮತ್ತು ಸಮಾನತೆಯ ಹರಿಕಾರ ಡಾ. ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನವು 1891 ರ ಏಪ್ರಿಲ್ 14 ಆಗಿದೆ. ಈ ದಿನವನ್ನು ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಗುವ ಸಾರ್ವಜನಿಕ ರಜಾ ದಿನವಾಗಿದೆ, ಮುಖ್ಯವಾಗಿ ಜಾತೀಯತೆ ಮತ್ತು ಸಾಮಾಜಿಕ ತಾರತಮ್ಯದ ವಿರುದ್ಧ ಅವರ ಹೋರಾಟವನ್ನು ಸ್ಮರಿಸಲಾಗುತ್ತದೆ.

**2) ಬೈಸಾಖಿ ದಿನ**

ಇದು ಪ್ರತಿ ವರ್ಷ ಏಪ್ರಿಲ್ 13 ಅಥವಾ 14 ರಂದು ಪಂಜಾಬಿ ಸಮುದಾಯದ ಸದಸ್ಯರು ಆಚರಿಸುವ ವಸಂತ ಸುಗ್ಗಿಯ ಹಬ್ಬವಾಗಿದೆ. ಈ ವರ್ಷ ಇದನ್ನು ಏಪ್ರಿಲ್ 13 ರಂದು ಆಚರಿಸಲಾಗುತ್ತದೆ, ಇದು ಭಾರತ ಮತ್ತು ಪ್ರಪಂಚದಾದ್ಯಂತ ಆಚರಿಸಲಾಗುವ ಸಿಖ್ಖರಿಗೆ ಮಹತ್ವದ ಹಬ್ಬಗಳಲ್ಲಿ ಒಂದಾಗಿದೆ.

**3) ಸೌರ ಹೊಸ ವರ್ಷ ಅಥವಾ ಮೇಷ ಸಂಕ್ರಾಂತಿ**

ಹಿಂದೂ ಚಾಂದ್ರಸೌರ ಕ್ಯಾಲೆಂಡರ್‌ನಲ್ಲಿ, ಮೇಷ ಸಂಕ್ರಾಂತಿಯು ಸೌರಚಕ್ರ ವರ್ಷದ ಮೊದಲ ದಿನವನ್ನು ಸೂಚಿಸುತ್ತದೆ, ಇದನ್ನು ಸೌರ ಹೊಸ ವರ್ಷ ಎಂದೂ ಕರೆಯಲಾಗುತ್ತದೆ. ಪ್ರಾಚೀನ ಸಂಸ್ಕೃತ ಸಾಹಿತ್ಯದ ಪ್ರಕಾರ, ಇದು ಮೇಷ ರಾಶಿಗೆ ಸೂರ್ಯನ ಪ್ರವೇಶವನ್ನು ಗುರುತಿಸುವ ನಿರ್ದಿಷ್ಟ ಸೌರ ಚಲನೆಯನ್ನು ಸಂಕೇತಿಸುತ್ತದೆ. ಅಸ್ಸಾಮಿ, ಒಡಿಯಾ, ಪಂಜಾಬಿ, ಮಲಯಾಳಂ, ತಮಿಳು ಮತ್ತು ಬಂಗಾಳಿ ಕ್ಯಾಲೆಂಡರ್‌ಗಳಲ್ಲಿ, ಸೌರಚಕ್ರ ವರ್ಷವು ಮುಖ್ಯವಾಗಿದೆ. ಈ ದಿನವು ಪ್ರಮುಖ ಬೌದ್ಧ, ಸಿಖ್ ಮತ್ತು ಹಿಂದೂ ಹಬ್ಬಗಳಿಗೆ ಅಡಿಪಾಯವಾಗಿಯೂ ಕಾರ್ಯನಿರ್ವಹಿಸುತ್ತದೆ.

**4) ಪುತಂಡು ಅಥವಾ ತಮಿಳು ಹೊಸ ವರ್ಷ**

ತಮಿಳು ಕ್ಯಾಲೆಂಡರ್‌ನಲ್ಲಿ ವರ್ಷದ ಮೊದಲ ದಿನವನ್ನು ಪುತಂಡು ಎಂದು ಕರೆಯಲಾಗುತ್ತದೆ, ಇದನ್ನು ಸಾಮಾನ್ಯವಾಗಿ ತಮಿಳು ಹೊಸ ವರ್ಷ ಎಂದು ಕರೆಯಲಾಗುತ್ತದೆ. ಈ ಆಚರಣೆಯು ಸಾಮಾನ್ಯವಾಗಿ ಗ್ರೆಗೋರಿಯನ್ ಕ್ಯಾಲೆಂಡರ್‌ನ ಏಪ್ರಿಲ್ 14 ರಂದು ಬರುತ್ತದೆ. ಇದನ್ನು ಭಾರತದ ತಮಿಳುನಾಡು ರಾಜ್ಯ ಹಾಗೂ ಶ್ರೀಲಂಕಾ ಮತ್ತು ಮಲೇಷ್ಯಾದ ಕೆಲವು ಪ್ರದೇಶಗಳಲ್ಲಿ ಸಾಂಪ್ರದಾಯಿಕ ಸಮಾರಂಭಗಳು, ಊಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುತ್ತದೆ.

## ಸುಭಾಷಿತ

ಮುಕ್ತ ವಾತಾವರಣದಲ್ಲಿ ಕೆಲಸ ಮಾಡುವವರು ಮಾತ್ರ ಶ್ರೇಷ್ಠ ವಿಚಾರಗಳನ್ನು ಸೃಷ್ಟಿಸಬಲ್ಲರು.

–ಆಲ್ಬರ್ಟ್ ಐನ್‌ಸ್ಟೀನ್

# ನಿರ್ಧಾರ ಎಂದು ಬಣ್ಣಿಸಿದ ಪ್ರಧಾನಿ ಮೋದಿ
# 21ನೇ ಶತಮಾನದ ಐತಿಹಾಸಿಕ ಸ್ತ್ರೀ ಶಾಸನ ಶಕ್ತಿ

**ನವದೆಹಲಿ: ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡುವ ನಾರಿ ಶಕ್ತಿ ವಂದನ್ ಅಧಿನಿಯಮ್ (ಸಂವಿಧಾನದ 128 ನೇ ತಿದ್ದುಪಡಿ 2023) ಮಸೂದೆಯು 21 ನೇ ಶತಮಾನದಲ್ಲಿ ಭಾರತ ತೆಗೆದುಕೊಳ್ಳಲಿರುವ ಅತೀ ದೊಡ್ಡ ನಿರ್ಧಾರಗಳಲ್ಲಿ ಒಂದಾಗಲಿದ್ದು, ಪ್ರಸ್ತಾವಿತ ಮಹಿಳಾ ಮೀಸಲಾತಿ ಶಾಸನ ನಾರಿ ಶಕ್ತಿಗೆ ಮೀಸಲಾದ ಐತಿಹಾಸಿಕ ಹೆಜ್ಜೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಣ್ಣಿಸಿದ್ದಾರೆ.**

ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ನಾರಿ ಶಕ್ತಿ ವಂದನ್ ಸಮೇಳನವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿಯವರು, ದೇಶದ ಅಭಿವೃದ್ಧಿಯ ಪಯಣದಲ್ಲಿ ಈ ನಿರ್ಣಾಯಕ ಮೈಲಿಗಲ್ಲುಗಳ ನಡುವೆ ಭಾರತವು 21 ನೇ ಶತಮಾನದ ಅತಿದೊಡ್ಡ ನಿರ್ಧಾರಗಳಲ್ಲಿ ಒಂದನ್ನು ತೆಗೆದುಕೊಳ್ಳಲಿದೆ ಎಂದು ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಈ



ನಿರ್ಧಾರವನ್ನು ನಾರಿ ಶಕ್ತಿಗೆ ಸಮರ್ಪಿಸಲಾಗಿದೆ ಎಂದು ಭಾವುಕರಾಗಿ ನುಡಿದರು. ಈ ನಿರ್ಧಾರವು ಸಾಮಾಜಿಕ ನ್ಯಾಯವನ್ನು ಆಡಳಿತ ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆಯ ಪ್ರಮುಖ ಭಾಗವನ್ನಾಗಿ ಮಾಡುತ್ತದೆ. ನಮ ದೇಶದ ಸಂಸತ್ತು ಹೊಸ ಇತಿಹಾಸವನ್ನು ಸೃಷ್ಟಿಸುವ ಹಂತದ ಹತ್ತಿರದಲ್ಲಿದೆ. ಹಿಂದಿನ ಪರಿಕಲ್ಪನೆಗಳನ್ನು ಅರಿತುಕೊಳ್ಳುವ ಹೊಸ ಇತಿಹಾಸ. ಭವಿಷ್ಯದ ನಿರ್ಣಯಗಳನ್ನು ಪೂರೈಸುವ ಸಮಾನತೆಯ ಭಾರತಕ್ಕಾಗಿ ಒಂದು ನಿರ್ಣಯವಾಗಲಿದೆ. ಸಾಮಾಜಿಕ ನ್ಯಾಯವು ಕೇವಲ ಘೋಷಣೆಯಲ್ಲ. ಆದರೆ ನಮ ಕೆಲಸದ ಸಂಸ್ಕೃತಿಯ ನೈಸರ್ಗಿಕ ಭಾಗವಾಗಿದೆ. ನಮ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಾಗಿದೆ. ಶಾಸನ ಸಭೆಗಳಿಂದ ದೇಶದ ಸಂಸತ್ತಿನವರೆಗೆ ದಶಕಗಳ ಕಾಯುವಿಕೆಗೆ ತೆರೆ ಎಳೆಯುವ ಸಮಯ ಬಂದಿದೆ. ಅದುವೇ ಏಪ್ರಿಲ್ 16, 17 ಮತ್ತು 18 ಎಂದರು. ದಶಕಗಳಿಂದ ರಾಜಕೀಯ ಪಕ್ಷಗಳು ಬೆಂಬಲಿಸುವ ಬಹುನಿರೀಕ್ಷಿತ ಕ್ರಮ ಇದಾಗಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಅಗತ್ಯದ ಚರ್ಚೆ ನಾಲ್ಕು ದಶಕಗಳಿಂದ ನಡೆಯುತ್ತಿದೆ. ಇದು ಎಲ್ಲಾ ಪಕ್ಷಗಳು ಮತ್ತು ಹಲವು ತಲೆಮಾರುಗಳ ಪ್ರಯತ್ನಗಳನ್ನು ಒಳಗೊಂಡಿದೆ.

3ನೇ ಪುಟಕ್ಕೆ

# ಶ್ರೀ ಮಾರುತೇಶ್ವರ ದರ್ಶನ ಪಡೆದ ಶಾಸಕ ನಾಡಗೌಡ



**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಹಾಗೂ ಮುದ್ದೇಬಿಹಾಳ ಮತಕ್ಷೇತ್ರದ ಶಾಸಕರಾದ ಸಿ.ಎಸ್.ನಾಡಗೌಡ (ಅಪ್ಪಾಜಿ) ಅವರು ಹೊಸಳ್ಳಿ ಗ್ರಾಮದ ಶ್ರೀ ಮಾರುತೇಶ್ವರ ನೂತನ ಮಂದಿರಕ್ಕೆ ಭೇಟಿ ನೀಡಿದರು. ತಾಳಿಕೋಟಿ ತಾಲೂಕಿನ ಸುಕ್ಷೇತ್ರ ಹೊಸಹಳ್ಳಿ ಗ್ರಾಮದಲ್ಲಿ ಇತ್ತೀಚಿಗೆ ಲೋಕಾರ್ಪಣೆಗೊಂಡಿರುವ ಶ್ರೀ ಮಾರುತೇಶ್ವರರ ನೂತನ ಮಂದಿರಕ್ಕೆ ಶನಿವಾರ ಸಂಜೆ ಭೇಟಿ ನೀಡಿದ ಶಾಸಕ ಅಪ್ಪಾಜಿ ನಾಡಗೌಡರು ವಿಶೇಷ ಪೂಜೆ ಸಲ್ಲಿಸಿ ದರ್ಶನ ಪಡೆದುಕೊಂಡರು.**

ಈ ಸಂದರ್ಭದಲ್ಲಿ ಮಾತನಾಡಿದ ಅವರು ಶ್ರೀ ಮಾರುತೇಶ್ವರರ ನೂತನ ಮಂದಿರವನ್ನು ನಿರ್ಮಾಣ ಮಾಡಿ ಉಜ್ಜಯಿನಿ ಜಗದ್ಗುರುಗಳಿಂದ ಇದನ್ನು ಲೋಕಾರ್ಪಣೆಗೊಳಿಸಿರುವುದು ಅತ್ಯಂತ ಪುಣ್ಯದ ಕಾರ್ಯವಾಗಿದೆ ಈ ಕಾರ್ಯಕ್ರಮದಲ್ಲಿ ನನಗೂ ಭಾಗವಹಿಸಬೇಕಾಗಿತ್ತು ಉಪಚುನಾವಣೆಯ ಕೆಲಸಗಳ ಒತ್ತಡದಿಂದಾಗಿ ಬರಲು ಸಾಧ್ಯವಾಗಲಿಲ್ಲ ನಿಷ್ಕಳಂಕ ಮನಸ್ಸಿನಿಂದ ಈ ದೇವಸ್ಥಾನದ ನಿರ್ಮಾಣದಲ್ಲಿ ಸಹಕರಿಸಿದ ಎಲ್ಲರಿಗೂ ಶ್ರೀ ಮಾರುತೇಶ್ವರ ಒಳ್ಳೆಯದನ್ನು ಮಾಡಲೆಂದು ಹಾರೈಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಶಾಸಕ ಅಪ್ಪಾಜಿ ನಾಡಗೌಡರನ್ನು ಗ್ರಾಮದ ಹಿರಿಯರು ಸನ್ಮಾನಿಸಿ ಗೌರವಿಸಿದರು. ಈ ಸಮಯದಲ್ಲಿ ಗಣ್ಯರಾದ ಸೋಮನಗೌಡ ಹಾದಿಮನಿ, ಬಸನಗೌಡ ಬಿರಾದಾರ, ಸಿದ್ದನಗೌಡ ಪಾಟೀಲ(ನಾವದಗಿ), ಪ್ರಭುಗೌಡ ಮದರಕಲ್ಲ,ಎಚ್.ಬಿ.ಬಿರಾದಾರ, ನಂದನಗೌಡ, ಮಲ್ಲನಗೌಡ ಬಿರಾದಾರ, ಹಣಮಂತ್ರಾಯಗೌಡ, ಪರ್ವತಗೌಡ ಮತ್ತಿತರರು ಇದ್ದರು.

# ಬಸವರಾಜ ಪಾಟೀಲ್ ಅನ್ವರಿ ಅವರ ಅಭಿನಂದನಾ ಸಮಾರಂಭ ಕಾರ್ಯಕ್ರಮ ಯಶಸ್ವಿಗೊಳಿಸಲು ಮನವಿ

**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ಲಿಂಗಸುಗೂರು ಪಟ್ಟಣದಲ್ಲಿ ಏ.18 ರಂದು ನಡೆಯಲಿರುವ ಕೇಂದ್ರದ ಮಾಜಿ ಮಂತ್ರಿ ಬಸವರಾಜ ಪಾಟೀಲ್ ಅನ್ವರಿ ಅವರ ಅಭಿನಂದನಾ ಕಾರ್ಯಕ್ರಮ ಹಾಗೂ ಅನ್ವರಿ ಅಸೀಮ ಗ್ರಂಥ ಬಿಡುಗಡೆ ಸಮಾರಂಭವನ್ನು ಯಶಸ್ವಿಗೊಳಿಸಬೇಕು ಎಂದು ಯುವ ಮುಖಂಡ ಸೂಗಣ್ಣ ಬಾಳೆಕಾಯಿ ಮನವಿ ಮಾಡಿದರು.**

ಪಟ್ಟಣದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರಯ, ಕೊಪ್ಪಳ ಗವಿಮಠದ ಗವಿಸಿದ್ದೇಶ್ವರ ಸ್ವಾಮೀಜಿ ನೇತ್ರತ್ವದಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದ ರಾಜ್ಯಖಾತೆ ಸಚಿವ ವಿ. ಸೋಮಣ್ಣ ಚಾಲನೆ ನೀಡಲಿದ್ದಾರೆ.



ಸಂಸದ ಜಗದೀಶ ಶೆಟ್ಟರ್, ಕಾನೂನು, ಸಂಸದೀಯ ಸಚಿವ ಎಚ್.ಕೆ. ಪಾಟೀಲ್, ಶಾಸಕ ಮಾನಪ್ಪ ವಜ್ಜಲ್ ಸೇರಿದಂತೆ ನಾನಾ ಮಠಾಧೀಶರು ಭಾಗವಹಿಸಲಿದ್ದಾರೆ.

ಬಸವರಾಜ ಪಾಟೀಲ್ ಅವರು 84 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಏ.16 ರಂದು ಅವರ ಸ್ವಗ್ರಾಮ ಅನ್ವರಿಯಲ್ಲಿ ಸಹಸ ಚಂದ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ನಾಡಿನ 90ಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಪುರಸಭೆ ನಾಮ ನಿರ್ದೇಶನ ಸದಸ್ಯ ಕೃಷ್ಣ ಚಿಗರಿ, ಎಂ. ಅಮರೇಶ, ಸುರೇಶ ಬ್ಯಾಳಿ ಇದ್ದರು.

# ಎನ್‌ಸಿಸಿ ಅಧಿಕಾರಿ ಬಾಬು ದೊಡ್ಡಮನಿಗೆ ಲೆಫ್ಟಿನೆಂಟ್ ಹುದ್ದೆ

**ನೈಜ್ಯ ದೆಸೆ ನ್ಯೂಸ್**

**ಸುರಪುರ: ವೀರಪ್ಪ ನಿಷ್ಠಿ ತಾಂತ್ರಿಕ ಮಹಾವಿದ್ಯಾಲಯ (VNEC) ದ ಎನ್‌ಸಿಸಿ ಅಧಿಕಾರಿ ಬಾಬು ದೊಡ್ಡಮನಿ ಕೋಳಕುರ ಅವರು ಭಾರತೀಯ ಸೇನೆಯ ಎನ್‌ಸಿಸಿ ವಿಭಾಗದಿಂದ ಲೆಫ್ಟಿನೆಂಟ್ ಹುದ್ದೆಗೆ ಭಾಜನರಾಗಿದ್ದಾರೆ.**

ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯ ಕ್ಯಾಂಪ್ಟಿಯಲ್ಲಿರುವ ಆಫೀಸರ್ಸ್ ಟ್ರೈನಿಂಗ್ ಅಕಾಡೆಮಿಯಲ್ಲಿ ನಡೆದ ಪಿಆರ್‌ಸಿ–ಎನ್ ಸೀನಿಯರ್ ಡಿವಿಷನ್ ಕೋರ್ಸ್ ಸಂಖ್ಯೆ 174ರಲ್ಲಿ ಅವರು ಜನವರಿ 5ರಿಂದ ಏಪ್ರಿಲ್ 4, 2026ರವರೆಗೆ ಮೂರು ತಿಂಗಳ ಕಠಿಣ ಸೈನಿಕ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಏಪ್ರಿಲ್ 4ರಂದು ಕ್ಯಾಂಪ್ಟಿಯ ಚುನ್ನಿ ಲಾಲ್ ಪೆರೇಡ್ ಮೈದಾನದಲ್ಲಿ ನಡೆದ ಪಾಸಿಂಗ್ ಔಟ್ ಪೆರೇಡ್ ಬಳಿಕ ಪೈಪಿಂಗ್ ಸಮಾರಂಭದಲ್ಲಿ ಅವರ ಹೆಗಲ ಮೇಲೆ ನಕ್ಷತ್ರಗಳನ್ನು ಅಳವಡಿಸುವ





ಮೂಲಕ ಲೆಫ್ಟಿನೆಂಟ್ ಹುದ್ದೆಯನ್ನು ಅಧಿಕೃತವಾಗಿ ಪ್ರದಾನ ಮಾಡಲಾಯಿತು. ಈ ಸಾಧನೆಯ ಹಿನ್ನೆಲೆಯಲ್ಲಿ ಮಹಾವಿದ್ಯಾಲಯದ ವತಿಯಿಂದ ಶ್ರೀ ಬಾಬು ದೊಡ್ಡಮನಿ ಅವರಿಗೆ ಅಭಿನಂದನೆ ಸಲ್ಲಿಸಿ ಸನ್ಮಾನಿಸಲಾಯಿತು. ಸನ್ಮಾನ ಸಮಾರಂಭದಲ್ಲಿ ಮಹಾವಿದ್ಯಾಲಯದ ಜಂಟಿ ಕಾರ್ಯದರ್ಶಿ ಶ್ರೀ ದೊಡ್ಡಪ್ಪ ಎಸ್. ನಿಷ್ಠಿ, ಪ್ರಾಂಶುಪಾಲರಾದ ಡಾ. ಶರಣಬಸಪ್ಪ ಸಾಲಿ, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

**ವರದಿ: ಜೆಟ್ಟೆಪ್ಪ ಎಸ್ ಪೂಜಾರಿ**

# ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಿ ಬೀದಿ ಬದಿ ವ್ಯಾಪಾರಸ್ಥರಿಗೆ ನೆಲೆ ಕಲ್ಪಿಸಿ: ಡಿಎಚ್.ಪೂಜಾರ್.

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರಿನಲ್ಲಿ: ಫುಟ್ ಪಾತ್ ವ್ಯಾಪಾರಿಗಳನ್ನು ತೆರವುಗೊಳಿಸಿ, ಈಗಾಗಲೇ ಒಂದೂವರೆ ವರ್ಷವೇ ಕಳೆದಿದೆ. ಆದರೂ ಇಲ್ಲಿನ ಜನಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲಿ, ಸರ್ಕಾರವಾಗಲಿ, ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಲಿಲ್ಲ ಯಾವುದೇ ಕ್ರಮ ಕೈಗೊಳ್ಳದೆ, ವ್ಯಾಪಾರಿಗಳನ್ನು ಬೀದಿ ತಳ್ಳಿದ್ದಾರೆಂದು ಡಿ.ಎಚ್.ಪೂಜಾರ್ ಹೇಳಿದರು.**

ನಗರದ ಗಂಗಾವತಿ ರಸ್ತೆಯ ತೋಟಗಾರಿಕೆ ಇಲಾಖೆ ಮುಂಭಾಗದಲ್ಲಿ ಬೀದಿ ಬದಿ ವ್ಯಾಪಾರಸ್ಥರ ಹೋರಾಟ ಸಮಿತಿ ವತಿಯಿಂದ ಧರಣಿ ಸತ್ಯಾಗ್ರಹ ಹಮ್ಮಿಕೊಂಡು ಮಾತನಾಡಿದ ಅವರು, ಅಂದು ಪುಟ್ ಪಾತ್ ತೆರವು ಗೊಳಿಸಿದ ಕಾರಣ ಬೀದಿ ಬದಿ ವ್ಯಾಪಾರಸ್ಥರು ಬೀದಿಗೆ



ಬಿದ್ದಿದ್ದಾರೆ. ಅವರ ಜೀವನಕ್ಕೆ ನೆಲೆ ಇಲ್ಲದಂತಾಗಿದ್ದು, ಜಿಲ್ಲಾಡಳಿತವು ವ್ಯಾಪಾರಸ್ಥರ ಜೀವನಕ್ಕೊಂದು ಭದ್ರತೆ ಒದಗಿಸಲು ಮುಂದಾಗಬೇಕು ಎಂದು ಸೋಮವಾರ ಪ್ರತಿಭಟನೆ ನಡೆಸಿದರು. ಬೀದಿ ಬದಿ ವ್ಯಾಪಾರಕ್ಕೆ ಕಡಿವಾಣ ಹಾಕಿದ ತಾಲೂಕು ಆಡಳಿತ ಹಾಗೂ ಶಾಸಕರು ಈಗ ಮೌನಕ್ಕೆ ಜಾರಿದ್ದಾರೆ. ನಗರದಲ್ಲಿ ಮುಖ್ಯ ರಸ್ತೆಯ ಮಧ್ಯೆ ಭಾಗದಿಂದ 21 ಮೀಟರ್ ಇರುವ ಎಲ್ಲಾ ಕಟ್ಟಡಗಳನ್ನು ತೆರವು ಮಾಡಬೇಕು ಎಂಬ ಉಚ್ಚ ನ್ಯಾಯಾಲಯ ಮತ್ತು ಭೂ ಕಬಳಿಕೆ ನಿಷೇಧದ ಆದೇಶವಿದ್ದರೂ ಸಹ ಅದನ್ನು ತಾಲೂಕು ಮತ್ತು ಜಿಲ್ಲಾಡಳಿತ ಉಲ್ಲಂಘಿಸಿದೆ. ಕಳೆದ ಜನವರಿ ತಿಂಗಳಲ್ಲಿ ಸಿಂಧನೂರು ನಗರಕ್ಕೆ ಸಿಎಂ ಸಿದ್ದರಾಮಯ್ಯನವರು ಆಗಮಿಸಿದಾಗ ಪ್ರತಿಭಟನೆ ಹಿಂಪಡೆಯಿರಿ ನನಗೆ ಒಂದು ತಿಂಗಳ ಕಾಲವಕಾಶ ಕೊಡಿ, ಬೀದಿ ಬದಿ ವ್ಯಾಪಾರಸ್ಥರಿಗೆ ವ್ಯಾಪಾರ ಮಾಡಲು ಸೂಕ್ತ ಜಾಗ ಒದಗಿಸಿಕೊಡುವ ಭರವಸೆ ನೀಡಿದ್ದರು. ಈಗ ಅವರು ಭರವಸೆ ಕೊಟ್ಟು ಮೂರು ತಿಂಗಳು ಕಳೆದರೂ ಕೂಡ ಇದುವರೆಗೂ ಪರ್ಯಾಯ ವ್ಯವಸ್ಥೆ ಕಲ್ಪಿಸಿದೆ, ರಾಜಕೀಯ ಸುಳ್ಳು ಭರವಸೆ ನೀಡಿ ಬೀದಿ ಬದಿ ವ್ಯಾಪಾರಸ್ಥರಿಗೆ ಮೂಗಿಗೆ ತುಪ್ಪ ಒರೆಸುವ ಕೆಲಸ ಮಾಡುತ್ತಿದ್ದಾರೆ.

ಅವರು ಹೇಳಿದ ಮಾತು ಮರೆತಂತೆ ಕಾಣುತ್ತಿದೆ. ಜಿಲ್ಲಾಧಿಕಾರಿಗಳು ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವ ಭರವಸೆ ನೀಡಿದ್ದರು. ಅದು ಕೂಡ ಕಾರ್ಯ ಪ್ರವೃತ್ತರಾಗಿಲ್ಲ. ಈ ಕೂಡಲೇ ನಗರದ ಎಲ್ಲಾ ವ್ಯಾಪಾರಿಗಳಿಗೆ ಪುನಃ ಫುಟ್ ಪಾತ್ ಮೇಲೆ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಬೇಕು. ತೋಟಗಾರಿಕೆ ಇಲಾಖೆಯ ಕಾಂಪೌಂಡ್ ಮುಂದೆ ಬಾಡಿಗೆ ನಿಗದಿ ಮಾಡಿ ವ್ಯಾಪಾರಕ್ಕೆ ಅನುಕೂಲ ಒದಗಿಸಿ, ಗಂಗಾವತಿ ಮತ್ತು ಕುಷ್ಟಗಿ ರಸ್ತೆಯಲ್ಲಿರುವ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಲು ಹಾಗೂ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಯಲ್ಲಿ: ರಮೇಶ ಪಾಟೀಲ್ ಬೇರ್ಗಿ, ಚಿಟ್ಟಿಬಾಬು, ಬಿ.ಎನ್.ಯರದಿಹಾಳ, ಶಾಮಿದ್ ಸಾಬ್, ಖಾಸಿಂ ಸಾಬ್, ಹುಸೇನ್ ಸಾಬ್, ವಸಿಂ, ಸೇರಿದಂತೆ ಅನೇಕ ಬೀದಿ ಬದಿ ವ್ಯಾಪಾರಸ್ಥರು ಪಾಲ್ಗೊಂಡಿದ್ದರು.

## ಸಾಹಿತ್ಯ ಸಿಂಚನ

ಇಂದೇಕೋ ನೀವು ನೆನಪಾಗುತ್ತೀರಿ

ನೀವು ನೆನಪಾಗುತ್ತೀರಿ ಬಾಬಾಸಾಹೇಬ್
ದಿನಂಪ್ರತಿ ನೋವುಂಡರೂ ಸೆಟೆದು ನಿಂತವರು
ಸ್ವಾತಂತ್ರ್ಯ, ಸಮಾನತೆಗಾಗಿ ಶ್ರಮಿಸಿದಿರಿ
ಪ್ರತಿಯೊಬ್ಬ ಶೋಷಿತರಿಗೆ ವಿಮೋಚಕರಾಗಿ ಬಂದವರು
ಒಂದು ದಿವ್ಯ ಮಾರ್ಗ ತೋರಿದವರು ಅಲ್ಲವೇ.? ಭೀಮ.!!

ಶತಮಾನಗಳಿಂದ ಅಟ್ಟಹಾಸದಿ ಮೆರೆದ ಮೇಲು ಕೀಳು
ಭಾವನೆ ಕಿತ್ತವರು ನೀವು..!
ಅದು ಎಂತಹಾ ಶಕ್ತಿ ಇತ್ತು ನಿಮ್ಮ ಲೇಖನಿಗೆ.?
ಭಾರತದ ಸಂವಿಧಾನವನ್ನೇ ಬರೆಯುವಷ್ಟು.!
ವಿಶ್ವದಲ್ಲಿ ಯಾರಿಗೂ ಸಿಗದ ಸ್ವಾತಂತ್ರ,ಮೂಲಭೂತ
ಹಕ್ಕುಗಳನ್ನು ನಮಗೆ ಕಲ್ಪಿಸಿದಿರಿ.!!

ಅದು ಎಂಥಹಾ ಬುದ್ಧಿಶಾಲಿ ನೀವು
ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಬರೆಯುವಷ್ಟು.!
ನಿಮ್ಮ ಲೇಖನಿಯಲ್ಲಿ ನೀವು ಅನುಭವಿಸಿದ ನೋವು,
ಉತ್ತಮ ಸಮಾಜದ ಆಶಯ ತುಂಬಿ ಬರೆದಿರಿ!!

ಆ ಮಹಾಭಾರತದ ಭೀಮನಷ್ಟೆ
ಈ ಭೀಮ ಬಲಶಾಲಿ ಬುದ್ಧಿಶಾಲಿ ಅಲ್ಲವೇ?
ಅದಕ್ಕೆ ಭಾರತದಲ್ಲಿ ಕಾನೂನು ಸುವ್ಯವಸ್ಥೆ ಮಾಡಿದಿರಿ!

ಇಂದೇಕೋ ನೀವು ನೆನಪಾಗುತ್ತೀರಿ ಬಾಬಾಸಾಹೇಬ್

ಆದರೆ ನೀವು ಇಂದು ಇದ್ದರೆ ನಿಮ್ಮ ಶ್ರಮ ನಾವು ವ್ಯರ್ಥ
ಮಾಡಿದ್ದು ಕಂಡು ಅದೆಷ್ಟು ನೊಂದುಕೊಳ್ಳುತ್ತಿದ್ದಿರಿ.!!
ರಕ್ಷಣೆಗೆಂದು ಆರಕ್ಷಕರನ್ನು ನೇಮಿಸಿದಿರಿ
ಅವರೇ ಭಕ್ಷಕರಾಗಿ ನಿಂತಿರುವರು.!

ಅಧಿಕಾರದ ಚುಕ್ಕಾಣಿ ಹಿಡಿಯಲು ಅನುಭವಿ ಹಿರಿಯರನ್ನು
ನೇಮಿಸಿದಿರಿ ಅವರಿಗೆ ಆಸೆ,ಹಣದ ಮೋಹ ಇರದೆಂದು
ಆದರೆ ಮುದಿನಾಯಿಗಳು ಅಲ್ಲ ನಾಯಕರು ತಮ್ಮ
ಭ್ರಷ್ಟತನದಿಂದ ತಮ್ಮ ಖಜಾನೆ ತುಂಬುತಿಹರು!!

ಎಲ್ಲರೂ ಸಮಾನರು ಎಂದು ತಾರತಮ್ಯವಿಲ್ಲದೆ ನ್ಯಾಯ
ಒದಗಿಸಲು
ನ್ಯಾಯ ದೇವತೆಗೆ ಬಟ್ಟೆ ಕಟ್ಟಿದಿರಿ.!
ಆದರೆ ಸರಿಯಾದ ನ್ಯಾಯ ಒದಗಿಸುವಲ್ಲಿ ಸೋತಿದ್ದಾಳೆ!
ಪ್ರತಿಯೊಬ್ಬರಿಗೂ ಮತದಾನ ಹಕ್ಕು ಕೊಟ್ಟಿರಿ
ಮದುವೆಯಾದ ಎಷ್ಟೋ ಹೆಣ್ಣು ಮಕ್ಕಳು ಮತದಾನ
ಕಳೆದುಕೊಂಡು ಪ್ರಜಾಪ್ರಭುತ್ವದ ಹಬ್ಬದಿಂದ ದೂರ
ಇದ್ದಾರೆ!!

ಜಾತಿ ಧರ್ಮದ ಹೆಸರಿನಲ್ಲಿ ಈಡಿ ಸಮಾಜವೆ ಭ್ರಷ್ಟತನ
ತುಕ್ಕು ಹಿಡಿದಿದೆ!
ನಮಗ್ಯಾಕೆ ಎನ್ನುವ ಭಾವನೆ ನಮ್ಮಲ್ಲಿ ಆಳವಾಗಿ ಬೇರು
ಬಿಟ್ಟಿದೆ!
ಸುಳ್ಳು,ಸ್ವಾರ್ಥ ಮೋಸ ತಲೆ ಎತ್ತಿ ತಿರುಗುತ್ತಿದೆ!
ಕುರುಡು ಕಾಂಚಾಣ ಲೋಕವನ್ನೇ ಕುಣಿಸುತ್ತಿದೆ!!
ಬಡತನ, ನಿರುದ್ಯೋಗ, ಅಜ್ಞಾನ, ಅಹಂಕಾರ ದೇಶವನ್ನೇ
ಕಿತ್ತು ತಿನ್ನುತಿದೆ!!

ಇಂದೇಕೋ ನೀವು ನೆನಪಾಗುತ್ತೀರಿ ಬಾಬಾಸಾಹೇಬ್

ಹೆಣ್ಣಿಗೆ ರಕ್ಷಣೆ, ಗೌರವ ಇಲ್ಲದಾಗಿದೆ
ಎದೆಯೊಳಗೆ ನೋವು ಕೊತ ಕೊತ ಕುದಿಯುತ್ತಿದೆ
ಇದನ್ನು ಸರಿಪಡಿಸಲು ಮತ್ತೊಮ್ಮೆ ನೀವು ಬರಬೇಕು
ಭೀಮ
ಸಮಾನತೆಯ ಪಥದಲ್ಲಿ ನಡೆವೆವು ನಾವು
ನೀವು ನಮ್ಮೊಳಗೆ ಇದ್ದೀರಿ ನೀವು
ನಮ್ಮ ನರನಾಡಿಗಳಲ್ಲಿ ಸೇರಿ ಬಿಟ್ಟಿದ್ದೀರಿ!!

ಅಬಲೆಯರು ನಾವು ಭ್ರಷ್ಟತನದ
ವಿರುದ್ಧ ಧ್ವನಿ ಎತ್ತಲಾರೆವು
ಜಾರಿ ಬಿದ್ದೆವು ಮಣ್ಣಮೆದ್ದೆವು
ನೀವೇ ಬರಬೇಕು ನಮ್ಮ ಶಕ್ತಿಯಾಗಿ
ಮತ್ತೊಮ್ಮೆ ಸಂವಿಧಾನ ತಿದ್ದಲು ಭೀಮ!!

ಇಂದೇಕೋ ನೀವು ನೆನಪಾಗುತ್ತೀರಿ

ಶ್ರೀಮತಿ ಕವಿತಾ ಹಿರೇಮಠ ಕವಿತಾಳ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ತಾಲೂಕು ಆಡಳಿತದಿಂದ ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳ ವಿತರಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ಹಾಗೂ ಪಕ್ಷಿ ಪ್ರೇಮಿ ಸಲಾವುದ್ದೀನ್ ಸಹಯೋಗದಲ್ಲಿ ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳ ವಿತರಣೆ ಕಾರ್ಯಕ್ರಮವನ್ನು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ರವರು ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳನ್ನು ವಿತರಿಸುವ ಮೂಲಕ ಚಾಲನೆ ನೀಡಿ ಮಾತನಾಡಿ.**

ಈ ಬಾರಿ ಬೇಸಿಗೆಯಲ್ಲಿ ಹೆಚ್ಚಿನ ಉಷ್ಣಾಂಶ ದಾಖಲಾಗಿರುವುದರಿಂದ ಜನ-ರಿಗಾಗಿ ಅರವಟಿಗೆಗಳನ್ನು ಪ್ರಾರಂಭಿಸಲಾಗಿದು ಅದರಂತೆ ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸವಾಗಿರುವ ಪಕ್ಷಿಗಳಿಗೂ ಕೂಡ ನೀರಿನ ಅವಶ್ಯಕತೆ ಇರುವುದರಿಂದ ಸರಕಾರಿ ಕಚೇರಿಗಳ ಆವರಣದಲ್ಲಿ ಹಾಗೂ ಮನೆಗಳ ಛಾವಣಿಗಳ ಮೇಲೆ ಬೇಸಿಗೆ ಮುಗಿಯುವವರೆಗೂ ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳನ್ನು ಕಟ್ಟಿ




ಅವುಗಳಿಗೆ ನಿತ್ಯ ನೀರು ಹಾಗೂ ಆಹಾರ ಪದಾರ್ಥಗಳನ್ನು ನೀಡುವುದರಿಂದ ಸಾಕಷ್ಟು ಪಕ್ಷಿಗಳ ಜೀವಗಳನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪಕ್ಷಿ ಪ್ರೇಮಿ ಸಲಾವುದ್ದೀನ್ ಮಾತನಾಡಿ ಪ್ರಕೃತಿಯಲ್ಲಿನ ಪ್ರತಿಯೊಂದು ಜೀವಿಗೂ ಕೂಡ ತನ್ನದೆ ಆದ ಮಹಾತ್ವವಿದೆ ಪರಿಸರ ಸಮಾತೋಲನದಲ್ಲಿ ಪಕ್ಷಿಗಳ ಪಾತ್ರ ಬಹುಳ ಪ್ರಮುಖವಾಗಿರುವುದ-ರಿಂದ ಅಳುವಿನಂಚಿನಲ್ಲಿರುವ ಪಕ್ಷಿಗಳನ್ನು ನಾವು ಉಳಿಸಿಕೊಳ್ಳಬೇಕಾಗಿದೆ ಪಕ್ಷಿಗಳು ತಮ್ಮಗೆ ಬೇಕಾದ ಆಹಾರ ಮತ್ತು ನೀರನ್ನು ತಾವೆ ಹುಡಿಕಿಕೊಳ್ಳುತ್ತವೆ ಅದ್ದರೆ ಬೇಸಿಗೆಯಲ್ಲಿ ನೀರಿನ ಮೂಲಗಳು ಬತ್ತುವುದರಿಂದ ಹಾಗೂ ಕೃಷಿ ಚಟುವಟಿಕೆಗಳು ಸ್ಥಗಿತಗೊಳ್ಳುವುದರಿಂದ ಪಕ್ಷಿಗಳಿಗೆ ಅಗತ್ಯವಾದ ನೀರು ಹಾಗೂ ಆಹಾರ ಸುಲಾಭವಾಗಿ ದೊರೆಯುವುದಿಲ್ಲ ಸಾಕಷ್ಟು ಸಣ್ಣ ಸಣ್ಣ ಹಕ್ಕಿಗಳು ಕುಡಿಯುವುದಕ್ಕೆ ನೀರು ಸಿಗದೆ ತಮ್ಮ ಜೀವವನ್ನು ಬಿಡುತ್ತವೆ ಅದ್ದರಿಂದ ಬೇಸಿಗೆ ಮುಗಿಯುವವರೆಗೂ ಪಕ್ಷಿಗಳಿಗೆ ನೀರು ಹಾಗೂ ಆಹಾರದ ವ್ಯವಸ್ಥೆ ಮಾಡುವುದು ಅಗತ್ಯವಾಗಿರುವುದರಿಂದ ಪ್ರತಿಯೊಂದು ಮನೆಗಳ ಆವರಣದಲ್ಲಿ ಪಕ್ಷಿಗಳಿಗೆ ಸ್ವಲ್ಪ ನೀರಿನ ವ್ಯವಸ್ಥೆ ಮಾಡುವುದು ಅಗತ್ಯ ಎಂದು ತಿಳಿಸಿದರು.

ಗ್ರೇಡ್-2 ತಹಶಿಲ್ದಾರ್ ಅಬ್ದುಲ್ ವಾಹಿದ್,ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ, ಪಿ.ಐ, ಸೋಮಶೇಖರ ಎಸ್. ಕೆಂಚರೆಡ್ಡಿ, ತಾ.ಆರೋಗ್ಯಧಿಕಾರಿ ಡಾ.ಶರಣಬಸವರಾಜ, ತಾ.ಪಶು ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಬಸವರಾಜ ಹಿರೇಮಠ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು. ವಿವಿಧ ಇಲಾಖೆಯ ಅಧಿಕಾ-ರಿಗಳಿಗೆ ಹಾಗೂ ಸಾರ್ವಜನಿಕ-ರಿಗೆ ಉಚಿತವಾಗಿ ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳ ವಿತರಣೆ ಮಾಡಲಾಯಿತು.

# ಶಿಕ್ಷಣ ಕ್ಷೇತ್ರದಲ್ಲಿನ ಅನುಪಮ ಸೇವೆಗಾಗಿ ಶಿಕ್ಷಕಿ ನೀಲಮ್ಮ ಅವರಿಗೆ ರಾಜ್ಯಮಟ್ಟದ 'ಬಸವ ಪುರಸ್ಕಾರ' ಗೌರವ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ನಗರದ ಪ್ರತಿಷ್ಠಿತ ಸಾಂಸ್ಕೃತಿಕ ಸಂಘಟನೆಯಾದ ಕಲಾ ಸಂಕುಲ ಸಂಸ್ಥೆಯು ಶಿಕ್ಷಣ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸುತ್ತಿರುವ ಬೆಳ್ಳಗನೂರು ಗ್ರಾಮದ ಯು.ಜಿ.ಎಚ್.ಪಿ.ಎಸ್ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ನೀಲಮ್ಮ ಅವರನ್ನು 2026ನೇ ಸಾಲಿನ ರಾಜ್ಯಮಟ್ಟದ 'ಬಸವ ಪುರಸ್ಕಾರ' ಪ್ರಶಸ್ತಿಗೆ ಆಯ್ಕೆ ಮಾಡಿದೆ.**

ಶಿಕ್ಷಣ ಕ್ಷೇತ್ರದಲ್ಲಿನ ಅವರ ದಕ್ಷ



ಆಡಳಿತ ಕಾರ್ಯವೈಖರಿ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನೀಡಿದ ಕೊಡುಗೆ ಮತ್ತು ಸಮಾಜಮುಖಿ ಚಿಂತನೆಗಳನ್ನು ಪರಿಗಣಿಸಿ ಈ ಗೌರವವನ್ನು ನೀಡಲಾಗುತ್ತಿದೆ. ಮುಂಬರುವ ಏಪ್ರಿಲ್ 19ರ ಭಾನುವಾರ ಬೆಳಿಗ್ಗೆ 11:00 ಗಂಟೆಗೆ ರಾಯಚೂರಿನ ರಂಗಮಂದಿರದಲ್ಲಿ ಆಯೋಜಿಸಲಾಗಿರುವ ಸಾಂಸ್ಕೃತಿಕ ಹಬ್ಬ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿವಿಧ ಮಠಾಧೀಶರು ಹಾಗೂ ಜಿಲ್ಲಾ ಮಟ್ಟದ ಗಣ್ಯರ ಸಮ್ಮುಖದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು.

ಶ್ರೀಮತಿ ನೀಲಮ್ಮ ಅವರ ಈ ಸಾಧನೆಗೆ ಶಿಕ್ಷಣ ಇಲಾಖೆಯ ಅಧಿಕಾ-ರಿಗಳು, ಬೆಳ್ಳಗನೂರು ಶಾಲಾ ಆಡಳಿತ ಮಂಡಳಿ, ಸಹೋದ್ಯೋಗಿ ಮಿತ್ರರು ಹಾಗೂ ಕಲಾ ಸಂಕುಲ ಸಂಸ್ಥೆಯ ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿ, ಶುಭ ಹಾರೈಸಿದ್ದಾರೆ. "ಒಬ್ಬ ಶಿಕ್ಷಕಿಯಾಗಿ ಸಮುದಾಯದ ಏಳಿಗೆಗಾಗಿ ಅವರು ತೋರುತ್ತಿರುವ ಆಸಕ್ತಿ ಇತರ-ರಿಗೆ ಮಾದರಿಯಾಗಿದೆ," ಎಂದು ಕಲಾ ಸಂಕುಲ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

# ಬಸ್ ವೇಗದ ಚಾಲನೆ, ಬೈಕ್ ಸವಾರನ ಮೇಲೆ ಬಸ್ ಢಿಕ್ಕಿ, ಚಾಲಕ ನಿರ್ಲಕ್ಷ

ನೈಜ್ಯ ದೆಸೆ ನ್ಯೂಸ್

**ಮಸ್ಕಿ ಸಮೀಪ ನಾಗಲದಿನ್ನಿ ಮುಖ್ಯ ಕಾಲುವೆ ಹತ್ತಿರ ಮಸ್ಕಿ ಘಟಕದ ಬಸ್ ಬೈಕ್ ಸವಾರನ ಮೇಲೆ ಡಿಕ್ಕಿ, ಬೈಕ್ ಸವಾರ ವೆಂಕಟೇಶ್ ಆನಂದಗಲ್ ಸ್ಥಳದಲ್ಲಿ ಬಿದ್ದು ಬೆನ್ನು ಮೂಳೆ ಬಹಳ ನೋವಿಂದ ಬಳಲುತ್ತಿದ್ದುರು.**

ಇಷ್ಟೆಲ್ಲಾ ಆದರೂ ಬಸ್ಸಿನ ಚಾಲಕ ನೋಡಿ ನಿನಗೆ ಏನಾಗಿದೆ ಏನು ಆಗಿಲ್ಲ ತಗೋ ಎಂದು ಮಾನವೀಯತೆ ಮರೆಯದೆ ಮನುಷ್ಯತ್ವ ಅರಿಯದೆ ಮೃಗ ತರ ಹಾಗೆ ಹೋಗಿದ್ದಾನೆ, ಆದರೆ ಬೈಕ್ ಸವಾರ ವೆಂಕಟೇಶ್ ಆನಂದಗಲ್ ಅವರು ನಾಗಲದಿನ್ನಿ ಮುಖ್ಯ ಕಾಲುವೆ ಕೆಳಗಡೆ



ಬಿದ್ದು, ನರಳುವುದನ್ನು ನೋಡಿ ರಸ್ತೆಯ ಪ್ರಯಾಣಿಕರು ಬಂದು ತಕ್ಷಣ ನೀರು ಕುಡಿಸಿ 112 ಪೊಲೀಸ್ ಮತ್ತು 108 ತುರ್ತು ವಾಹನಕ್ಕೆ ಕರೆ ಮಾಡಿ ಮಾನವೀಯತೆ ಮೆರೆದಿದ್ದಾರೆ, ಇಷ್ಟು ಎಲ್ಲಾ ಘಟನೆಗೆ ಕಾರಣರಾದ ಬಸ್ಸಿನ ಚಾಲಕ ಬಸ್ಸನ್ನು ಮಸ್ಕಿ ಬಸ್ ನಿಲ್ದಾಣಕ್ಕೆ ಹೋಗಿ ಬಸ್ಸು ನಿಲ್ಲಿಸಿ ಪರಾರಿ ಆಗಿದ್ದಾನೆ, ಇಂಥ ಚಾಲಕರನ್ನು ಸೇವೆಯಿಂದ ತೆಗೆಯಬೇಕು ಎಂದು ಸ್ಥಳದಲ್ಲಿದ್ದ ಜನರು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚಿಗೆ ಮಸ್ಕಿ ಘಟಕದ ಬಸ್ ಚಾಲಕರು ಅತಿ ವೇಗವಾಗಿ ಚಾಲನೆ ಮಾಡುತ್ತಿದ್ದು, ವಿಶೇಷವಾಗಿ ಮೊಬೈಲ್ ಬಳಕೆ ಮಾಡುತ್ತಾ ಚಾಲನೆ ಮಾಡುತ್ತಿರುವುದು ದುರಂತದ ವಿಚಾರ, ಹೀಗಾಗಿ ಮಸ್ಕಿ ಘಟಕದ ವ್ಯವಸ್ಥಾಪಕರು ಈ ಬಗ್ಗೆ ಸೂಕ್ಷ್ಮವಾಗಿ ಗಮನಿಸಿ ಬಸ್ ಚಾಲಕರಿಗೆ ಸರಿಯಾಗಿ ಚಾಲನೆ ಮಾಡಲು ಹೇಳಬೇಕು ಎಂದು ಹಾಲಾಪುರ ಸುತ್ತ ಮುತ್ತಲಿನ ಹಳ್ಳಿಗಳ ಪ್ರಯಾಣಿಕರು ಮಾತಾಗಿದೆ.

# ಬಡತನವನ್ನು ಜಯಿಸಿದ ಪ್ರತಿಭೆ :ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನ



ನೈಜ್ಯ ದೆಸೆ ನ್ಯೂಸ್

**ಅರಕೇರಾ: ಗ್ರಾಮೀಣ ಪ್ರದೇಶದ ಬಡ ಕೂಲಿ ಕಾರ್ಮಿಕ ಮಗಳು ವಿಜಯಲಕ್ಷ್ಮೀ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ 600 ಕ್ಕೆ 576 ಅಂಕ ಗಳಿಸುವ ಮೂಲಕ ತಾಲೂಕಿಗೆ ಮೊದಲ ಸ್ಥಾನ ಪಡೆದಿದ್ದು ಹುಟ್ಟೂರು ಬಿ.ಗಣೇಕಲ್ ಗ್ರಾಮದ ಪಂದ್ಯಾನದಲ್ಲಿ ಸಂಭ್ರಮ ಮನೆ ಮಾಡಿದೆ.**

ಬಡ ಕುಟುಂಬದಲ್ಲಿ ಜನಿಸಿದ ಪ್ರತಿಭಾವಂತ ವಿದ್ಯಾರ್ಥಿನಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಎಲ್ಲರ ಗಮನ ಸೆಳೆದಿದ್ದಾಳೆ. ಆರ್ಥಿಕ ಸಂಕಷ್ಟಗಳ ನಡೆವೆಯೂ ತನ್ನ ಶ್ರಮ,ದೃಢ ಸಂಕಲ್ಪ ಮತ್ತು ನಿರಂತರ ಪರಿಶ್ರಮದಿಂದ ಈ ಸಾಧನೆಯನ್ನು ಸಾಧ್ಯವಾಗಿಸಿದ್ದಾಳೆ. ದೇವದುರ್ಗ ಪಟ್ಟಣದ ಸರ್ಕಾರಿ ಬಾಲಕಿಂ-ಯರ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿಜಯಲಕ್ಷ್ಮೀ, ಕೂಲಿ ಕಾರ್ಮಿಕ ಸಿದ್ದಪ್ಪ ಮತ್ತು ಅವರ ಪತ್ನಿ ಬೆಂಗಳೂ-ರಿಗೆ ವಲಸೆ ಹೋಗಿ ದುಡಿದು ಮೂವರು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ.

ಈ ಸಾಧನೆಯ ವಿಷಯ ತಿಳಿದ ಪ್ರಭು ದೊರೆ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ಬೆಂಗಳೂರು



**"ಬಡತನದಲ್ಲಿಯೂ ಇಂತಹ ಸಾಧನೆ ಮಾಡಿರುವುದು ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗುತ್ತದೆ. ಗ್ರಾಮೀಣ ಭಾಗದ ಮಕ್ಕಳು ಐಎಎಸ್ ಅಂತಹಾ ಉನ್ನತ ಹುದ್ದೆಗಳನ್ನು ಪಡೆಯಬೇಕು. ಈ ವಿದ್ಯಾರ್ಥಿಗಳಿಗೆ ನನ್ನಿಂದ ಆದಷ್ಟು ನಾನು ಸಹಾಯವನ್ನು ಮಾಡುತ್ತೇನೆ," ಎಂದು ಹೇಳಿದರು. ಪ್ರಭು ದೊರೆ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ಬೆಂಗಳೂರು.**

ಅವರು ವಿದ್ಯಾರ್ಥಿನಿಯನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ವಿದ್ಯಾರ್ಥಿನಿಯ ಪರಿಶ್ರಮವನ್ನು ಮೆಚ್ಚಿದ ಅವರು, ಪಂದ್ಯಾನ ಗ್ರಾಮದಲ್ಲಿ ಸನ್ಮಾನಿಸಿ ಗೌರವಿಸಿದರು. ಈ ವಿದ್ಯಾರ್ಥಿನಿ ದಿನನಿತ್ಯ ವಿದ್ಯಾಭ್ಯಾಸದ ಕಡೆ ನಿರಂತರ ಗಮನ ಕೊಡುತ್ತಿದ್ದೆ, ಕಾಲೇಜಿನ ಉಪನ್ಯಾಸಕರ ಮಾರ್ಗದರ್ಶನ ಹಾಗೂ ನನ್ನ ತಂದೆ ತಾಯಿ ಪ್ರೋತ್ಸಾಹದಿಂದಲೇ ಈ ಯಶಸ್ಸು ಸಾಧ್ಯವಾಯಿತು ಎಂದು ಹೇಳಿದ್ದಾಳೆ.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಭು ದೊರೆ ಅವರು, ಇಂತಹ ಗ್ರಾಮೀಣ ಪ್ರದೇಶದಲ್ಲಿ ಇದ್ದು ಅತ್ಯುತ್ತಮ ಅಂಕವನ್ನು ಪಡೆದಿರುವುದು ಬಹಳ ಸಂತೋಷವಾಯಿತು. ಈ ಅಂಕಗಳು ಇಲ್ಲಿಗೆ ಸೀಮಿತವಾಗಿರದೆ ಮುಂದೆ ಕೂಡ ನಿಮ್ಮ ಸಾಧನೆ ಹೀಗೆ ಮುಂದೆ ಸಾಗಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಲ್ಲಿಂದಲೇ ತಯಾರಿ ನಡೆಸಿ ಮುಂದೆ ಐಎಎಸ್ ಅಂತಹಾ ದೊಡ್ಡ ದೊಡ್ಡ ಗುರಿಗಳನ್ನು ಇಟ್ಟುಕೊಂಡು ವಿದ್ಯಾಭ್ಯಾಸ ಮಾಡಿ, ಪಾಲಕ-ರಿಗೆ ಮತ್ತು ಗ್ರಾಮಕ್ಕೆ ಕೀರ್ತಿ ತನ್ನಿ ಎಂದು ವಿದ್ಯಾರ್ಥಿಗಳಿಗೆ ಸಲಹೆಗಳನ್ನು ನೀಡಿದರು. ಹಾಗೆ ಗ್ರಾಮದಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಹೆಚ್ಚು ಅಂಕಗಳನ್ನು ಪಡೆದ ರೇಣುಕಾ 96%, ಮಾಳಿಂಗರಾಯ 94%, ರಾಮನಗೌಡ 91% ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.


ವಿದ್ಯಾರ್ಥಿನಿ ಈ ಸಾಧನೆಗೆ ಶಿಕ್ಷಕರು, ಪೋಷಕರು ಹಾಗೂ ಸ್ಥಳೀಯರು ಸಂತೋಷ ವ್ಯಕ್ತಪಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಎತ್ತರ ಸಾಧನೆ ಮಾಡಲು ಎಲ್ಲರೂ ಶುಭಾಶಯ ಕೋರಿದ್ದಾರೆ. ಈ ಸಂದರ್ಭದಲ್ಲಿ ನಾಗರಾಜ ಕರ್ನಾಳ ಅರಕೇರಾ, ಮೌನೇಶ್ ನಾಯಕ ಅಡಕಲಗುಡ್ಡ, ಪ್ರಭುರಾಯ ಪಂದ್ಯಾನ, ಬೀರಪ್ಪ ಮಾಡಗೀರಿ, ಎಚ್. ಎಸ್.ನಾಯಕ ಬಿ.ಗಣೇಕಲ್, ಹಾಗೂ ಪಾಲಕರು ಗ್ರಾಮಸ್ಥರು ಇನ್ನಿತರರು ಉಪಸ್ಥಿತರಿದ್ದರು.

# ಏ.20 ರಂದು ಬಸವಜಯಂತಿ ಕಾರ್ಯಕ್ರಮ: ಭೀಮರಾಯ ಬಿ.ರಾಮಸಮುದ್ರ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತದಿಂದ ಸರಕಾರದ ವಿವಿಧ ಜಯಂತಿಗಳ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಮಾತನಾಡಿ ಏ.20 ರಂದು ಬಸವಜಯಂತಿ ಅಂಗವಾಗಿ ತಾಲೂಕು ಆಡಳಿತ ಹಾಗೂ ಅಖಿಲಭಾರತ ವೀರಶೈವ ಲಿಂಗಯಾತ ಮಹಾಸಭಾ,**

ತಾಲೂಕು ವೀರಶೈವ ಲಿಂಗಾಯತ ಸಮಾಜ, ಬಸವಕೇಂದ್ರ ಸಹಯೋಗದಲ್ಲಿ ಪಟ್ಟಣದ ಬಸವವೃತ್ತದಿಂದ ತಹಶೀಲ್ದಾರ್ ಕಚೇ-ರಿಯವರೆಗೆ ವಚನ ಗಾಯನ ಮೂಲಕ ವಿವಿಧ ಕಲಾತಂಡಗಳೊಂದಿಗೆ ಶ್ರೀ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಶಾಸಕ ಹಂಪಯ್ಯನಾಯಕ




ನೇತೃತ್ವದಲ್ಲಿ ಮೆರವಣಿಗೆ ನಡೆಸಲಾಗುವುದು ನಂತರ ವೇದಿಕೆಯಲ್ಲಿ ಬಸವಣ್ಣನವರ ಜೀವನ ಹಾಗೂ ತತ್ವ ಸಂದೇಶಗಳ ಬಗ್ಗೆ ಉಪನ್ಯಾಸಕ-ರಿಂದ ಉಪನ್ಯಾಸ ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದ ಗಣ್ಯರಿಗೆ ಸನ್ಮಾನ ,ವಚನ ಕಂಠಪಾಟ ಸ್ಪರ್ಧೇ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುವುದು. 21 ರಂದು ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮವನ್ನು ತಹಶೀಲ್ದಾರ್ ಕಚೇರಿಯಲ್ಲಿ ವಿಪ್ರ ಸಮುದಾಯದವರೊಂದಿಗೆ ಆಚರಿಸಲಾಗುವುದು.

ಶ್ರೀ ಶಂಕರಾಚಾರ್ಯರ ಜೀವನ ಹಾಗೂ ತತ್ವ ಸಂದೇಶಗಳ ಬಗ್ಗೆ ಉಪನ್ಯಾಸಕರಿಂದ ಉಪನ್ಯಾಸ ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದ ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ನಡೆಸಲಾಗುವುದು. ಏ.23 ರಂದು ಶ್ರೀ ಭಗೀರಥ ಜಯಂತಿ ಅಂಗವಾಗಿ ತಹಶೀಲ್ದಾರ್ ಕಚೇರಿಯಲ್ಲಿ ಶ್ರೀ ಭಗೀರಥ ಮಹಾರ್ಷಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಸರಳವಾಗಿ ಆಚರಿಸಲಾಗುವುದು. ಸರಕಾರದ ಜಯಂತಿ ಅಗಿರುವುದರಿಂದ ಮೂವರು ಮಹಾನಿಯರ ಜಯಂತಿಗಳನ್ನು ಸರಕಾರಿ ಕಚೇ-ರಿಗಳಲ್ಲಿ ಕಡ್ಡಾಯವಾಗಿ ಆಚರಿಸಿ ತಾಲೂಕು ಆಡಳಿತ ವತಿಯಿಂದ ನಡೆಯುವ ಜಯಂತಿಗಳಲ್ಲಿ ತಾಲೂಕಿನ ಎಲ್ಲಾ ಇಲಾಖೆಗಳ ತಾಲೂಕು ಮಟ್ಟದ ಆಧಿಕಾರಿಗಳು ಭಾಗವಹಿಸಬೇಕು.

ಜಯಂತಿಗಳನ್ನು ಆಥ-ರ್ಪೂರ್ಣವಾಗಿ ಆಚರಿಸುವುದಕ್ಕೆ ಸಮಾಜದ ಎಲ್ಲಾ ಸಮುದಾಯದವರು ಸಹಕಾರ ನೀಡಬೇಕು ಎಂದು ಕೋರಿದರು. ಸಭೆಯಲ್ಲಿ ಅಖಿಲಭಾರತ ವೀರಶೈವ ಲಿಂಗಯಾತ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷರಾದ ಅರುಣಕುಮಾರಚಂದಾ , ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹ-ರಿಹರ ಪಾಟೀಲ್ ,ಕೇದರನಾಥ,ಡಾ.ವಿ-ಜಯರಾವ್ ಕುಪನೇಶಿ ಮಾತನಾಡಿದರು. ಗ್ರೇಡ್-2 ತಹಶಿಲ್ದಾರ್ ಅಬ್ದುಲ್ ವಾಹಿದ್, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ, ಪಿ.ಐ, ಸೋಮಶೇಖರ ಎಸ್. ಕೆಂಚರೆಡ್ಡಿ, ತಾ.ಆರೋಗ್ಯಧಿಕಾರಿ ಡಾ.ಶರಣಬಸವರಾಜ, ಮುಖಂಡರಾದ ಜಾನೇಕಲ್ ನರಸಿಂಹಜೋಶಿ, ಶ್ರೀಧರ ಮಾಸ್ಟರ್, ಪ್ರಹ್ಲಾದ್ ಕುರ್ಡಿ, ವರದರಾಜ ಕುಲಕರ್ಣಿ,ನೀರಮಾನ್ವಿ ನರಸಿಂಹ ,ಜಯಾಚಾರ್ ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಇನ್ನಿತರರು ಇದ್ದರು.

# ನೇಮಕಾತಿ ಪ್ರಕಟಣೆ

ವಿಕಾಸ್ ಬ್ಯಾಂಕ್ ನೇಮಕಾತಿ 2026–46 ಮ್ಯಾನೇಜರ್/ಸೀನಿಯರ್ ಆಫೀಸರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 11, 2026 ವಿಕಾಸ್ ಬ್ಯಾಂಕ್ ನೇಮಕಾತಿ 2026: 46 ಮ್ಯಾನೇಜರ್/ಸೀನಿಯರ್ ಆಫೀಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ವಿಕಾಸ್ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಏಪ್ರಿಲ್ 2026 ರ ವಿಕಾಸ್ ಬ್ಯಾಂಕ್ ಅಧಿಕೃತ ಅಧಿಸೂಚನೆಯ ಮೂಲಕ ಮ್ಯಾನೇಜರ್/ಸೀನಿಯರ್ ಆಫೀಸರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ವಿಜಯನಗರ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 24–ಏಪ್ರಿಲ್–2026 ರಂದು ಅಥ–ವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 09–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24–ಏಪ್ರಿಲ್–2026 ಲಿಖಿತ ಪರೀಕ್ಷೆಯ ದಿನಾಂಕ (ಪ್ರೊಬೇಷನರಿ ಅಧಿಕಾರಿಗಳಿಗೆ ಮಾತ್ರ): ಏಪ್ರಿಲ್ 26, 2026 (ಭಾನುವಾರ) ಹೊಸಪೇಟೆಯಲ್ಲಿ. ಸಂದರ್ಶನ ದಿನಾಂಕ (ಆಯ್ದ ಪ್ರೊಬೇಷನರಿ ಅಧಿಕಾರಿಗಳಿಗೆ): ಏಪ್ರಿಲ್ 27, 2026 (ಸೋಮವಾರ) ಅಧಿಕೃತ ವೆಬ್‌ಸೈಟ್: vikas.bank.in

1ನೇ ಪುಟದಿಂದ....

ಪ್ರತಿಯೊಂದು ಪಕ್ಷವು ತನ್ನದೇ ಆದ ರೀತಿಯಲ್ಲಿ ಈ ಕಲ್ಪನೆಯನ್ನು ಮುಂದಿಟ್ಟಿದೆ. 2029 ರ ವೇಳೆಗೆ ಮಹಿಳಾ ಸಬಲೀಕರಣ ಕಾಯ್ದೆಯನ್ನು ಜಾರಿಗೆ ತರಬೇಕೆಂಬ ಸರ್ವಾನುಮತದ ಬೇಡಿಕೆ ಇದೆ. ಏ.16 ರಿಂದ ಸಂಸತ್ತು ಈ ವಿಷಯದ ಬಗ್ಗೆ ಸಮಗ್ರ ಚರ್ಚೆ ನಡೆಸಲಿದೆ. ಮಹಿಳಾ ಸಬಲೀಕರಣದ ಹಿತದೃಷ್ಟಿಯಿಂದ ಎಲ್ಲಾ ಪಕ್ಷಗಳು ಒಟ್ಟಾಗಿ ಈ ಉಪಕ್ರಮವನ್ನು ಮುಂದಕ್ಕೆ ಕೊಂಡೊಯ್ಯುತ್ತವೆ ಎಂಬ ಭರವಸೆಯನ್ನು ಅವರು ವ್ಯಕ್ತಪಡಿಸಿದರು. 2029 ರೊಳಗೆ (ಮಹಿಳಾ ಸಬಲೀಕರಣ ಕಾಯ್ದೆ) ಯಾವುದೇ ಬೆಲೆ ತೆತ್ತಾದರೂ ಜಾರಿಗೆ ತರಬೇಕು ಎಂಬ ಸರ್ವಾನುಮತದ ಬೇಡಿಕೆಯೂ ಇತ್ತು. ನಾವು 2029 ರ ಗಡುವನ್ನು ಮನಸ್ಸಿನಲ್ಲಿಟ್ಟುಕೊಂಡು, ಏ.16 ರಿಂದ ಸಂಸತ್ತಿನಲ್ಲಿ ಇದರ ಬಗ್ಗೆ ಸಮಗ್ರ ಚರ್ಚೆ ನಡೆಯಲಿದೆ. ಈ ಬಾರಿಯೂ ಸಹ ಪರಸ್ಪರ ಸಹಕಾರ ಮತ್ತು ಭಾಗವಹಿಸುವಿಕೆಯೊಂದಿಗೆ ಈ ಕೆಲಸ ನಡೆಯಬೇಕೆಂಬುದು ನಮ ಪ್ರಯತ್ನ ಮತ್ತು ಬಯಕೆಯಾಗಿದೆ. ಎಲ್ಲರ ಸಾಮೂಹಿಕ ಪ್ರಯತ್ನಗಳಿಂದ, ಇಡೀ ಸದನದ ಘನತೆ ಹೊಸ ಎತ್ತರವನ್ನು ತಲುಪುತ್ತದೆ. ಪ್ರತಿಯೊಂದು ಪಕ್ಷವು ರಾಜಕೀಯವನ್ನು ಮೀರಿ ನಮಗಾಗಿ ಈ ಪ್ರಮುಖ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ದೇಶದ ಪ್ರತಿಯೊಬ್ಬ ಮಹಿಳೆಯೂ ಸಂತೋಷಪಡುತ್ತಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಶಾಲೆಯಲ್ಲಿ ಶೌಚಾಲಯಗಳ ಸಮಸ್ಯೆಯನ್ನು ನಿವಾರಿಸಲು, ಸ್ವಚ್ಛ ಭಾರತ ಅಭಿಯಾನ, ಉಚಿತ ಸ್ಯಾನಿಟರಿ ಪ್ಯಾಡ್‌ಗಳು, ವಾರ್ಷಿಕ 1 ಲಕ್ಷ ರೂಪಾಯಿಗಳ ಕ್ರೀಡಾ ಬೆಂಬಲವಿದೆ. ಭವಿಷ್ಯದಲ್ಲಿ ಸೈನ್ಯಕ್ಕೆ ಸೇರಲು ಬಯಸುವವರಿಗೆ, ಸರ್ಕಾರ ಸೈನಿಕ ಶಾಲೆಗಳನ್ನು ತೆರೆದಿದೆ. ನಂತರದ ಜೀವನದಲ್ಲಿ ಅಡುಗೆ ಮನೆಯ ಹೊಗೆಯಿಂದ ರಕ್ಷಿಸಲು ವಿನ್ಯಾಸಗೊಳಿಸಲಾದ ಉಜ್ವಲ ಯೋಜನೆಯ ಜೊತೆಗೆ ಪ್ರತಿ ಮನೆಗೆ ನಲ್ಲಿ ನೀರನ್ನು ಒದಗಿಸುತ್ತದೆ. ಅಲ್ಲದೆ 5 ಲಕ್ಷ ರೂಪಾಯಿಗಳವರೆಗೆ ಉಚಿತ ಚಿಕಿತ್ಸೆಯನ್ನು ಒದಗಿಸುವ ಆಯುಷಾನ್ ಯೋಜನೆಯು ನಮ ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರಯೋಜನವನ್ನು ನೀಡುತ್ತಿದೆ. 30 ಮಿಲಿಯನ್‌ಗಿಂತಲೂ ಹೆಚ್ಚು ಮಹಿಳೆಯರು ಮನೆ ಮಾಲೀಕರಾಗಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಬಿಚ್ಚಾಲಿ ಗ್ರಾಮದಲ್ಲಿನೂತನವಾಗಿ ಜಾಮಿಯಾ ಮಸೀದ್, ಈದ್ಗಾ ಹಾಗೂ ಖಬ್ರಿಸ್ಥಾನ್ ಕಾರ್ಯಗಳಿಗೆ ಒಂದೇ ಸಮಿತಿ ರಚನೆ ಯಶಸ್ವಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ತಾಲೂಕಿನ ಬಿಚ್ಚಾಲಿ ಗ್ರಾಮದಲ್ಲಿ ದಿನಾಂಕ 10.04.2026 ರಂದು ಗ್ರಾಮದ ಜಾಮಿಯಾ ಮಸೀದಿಯಲ್ಲಿ ಮುಸ್ಲಿಂ ಬಾಂಧವರು ಸಭೆ ಸೇರಿ ನೂತನವಾಗಿ ಜಾಮಿಯಾ ಮಸೀದ್, ಈದ್ಗಾ ಹಾಗೂ ಖಬ್ರಿಸ್ಥಾನ್ ಕಾರ್ಯಗಳಿಗೆ ಒಂದೇ ಸಮಿತಿ ರಚಿಸಿದರು.**

ಗ್ರಾಮದ ಸಂಪ್ರದಾಯದಂತೆ ಎಲ್ಲಾ ಧಾರ್ಮಿಕ ಹಾಗೂ ಸಮುದಾಯ ಕಾರ್ಯಗಳನ್ನು ಒಂದೇ ಸಮಿತಿಯ ಮೂಲಕ ನಿರ್ವಹಿಸುವ ಉದ್ದೇಶದಿಂದ ಈ ಸಮಿತಿ ರಚಿಸಲಾಗಿದೆ.




ನೂತನ ಸಮಿತಿ ಸದಸ್ಯರು:
1. ಮೊಹಮ್ಮದ್ ರಫಿ ತಂದೆ: ನಜೀರ್ ಅಹ್ಮದ್ ? ಅಧ್ಯಕ್ಷರು
2.ಖಾಜಾ ಹುಸೇನ್ ತಂದೆ: ಬಶೀರ್ ಅಹ್ಮದ್ ? ಕಾರ್ಯದರ್ಶಿ
3.ಅಬ್ಬಾಸ್ ಅಲಿ ತಂದೆ: ಖಾಜಾ ಹುಸೇನ್ ? ಖಜಾಂಚಿ
4.ಬಂದೇನವಾಜ್ ತಂದೆ: ಗೂಡು ಹುಸೇನ್ ? ಸದಸ್ಯರು
5. ಅಲ್ಲಬಕಾಶ್ ತಂದೆ: ಸಬ್ಜಲಿ ಸಾಬ್ ? ಸದಸ್ಯರು
6.ನೂರ್ ಅಹ್ಮದ್ ತಂದೆ: ಬಶೀರ್ ಅಹ್ಮದ್ ? ಸದಸ್ಯರು
7.ಬಂದೇನವಾಜ್ ತಂದೆ: ಮಟ್ಮಾರಿ ಬಡೆಸಾಬ್ ? ಸದಸ್ಯರು
8.ಮುಜ್ಜುಪಟೇಲ್ ತಂದೆ:ಮಹಿಬೂಬ್?ಸದಸ್ಯರು
9. ಸದ್ದಾಮ್ ಹುಸೇನ್ ತಂದೆ: ಖಾಸಿಂ ಅಲಿ ? ಸದಸ್ಯರು
10. ರಶೀದ್ ತಂದೆ: ಚೌದ್ರಿ ಖಲೀಲ್ ಸದಸ್ಯರು



11. ಮೊಹಮ್ಮದ್ ತಂದೆ: ವಾಲೇಕರ್ ಬಡೆಸಾಬ್ ಸದಸ್ಯರು

ಈ ಸಂದರ್ಭದಲ್ಲಿ ನೂತನ ಕಾರ್ಯದರ್ಶಿ ಖಾಜಾ ಹುಸೇನ್ ಅವರು ಮಾತನಾಡಿ, "ನಮ್ಮ ಗ್ರಾಮದಲ್ಲಿ ಮೊದಲಿನಿಂದಲೂ ಒಂದೇ ಸಮಿತಿ ಕಾರ್ಯನಿರ್ವಹಿಸುವ ಪದ್ಧತಿ ಇದೆ. ಇದು ಊರಿನ ಎಲ್ಲಾ ಮುಸ್ಲಿಂ ಬಾಂಧವರ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಹಾಯ ಮಾಡುತ್ತದೆ" ಎಂದು ಹೇಳಿದರು. ಸಭೆಯಲ್ಲಿ ಮುಫ್ತಿ ನಬಿಸಾಬ್, ಅಫ್ಜಲ್ ಸಾಬ್ (ಮೆಕಾನಿಕ್), ಮೊಹಮ್ಮದ್ ಹನೀಫ್ ಸಾಬ್, ಬಂಡಿ ರಜಾಕ್ ಸಾಬ್, ರಾಜಹಮದ್, ಚಾಂದ್ ಪಾಷಾ, ಖಾಜಾ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಏಪ್ರಿಲ್ 14ರಂದು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ: ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಮನವಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಏಪ್ರಿಲ್ 14ರಂದು ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಯನ್ನು ಆಚರಿಸಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮುಖಂಡರು, ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.**



ಅಂದು ಬೆಳಿಗ್ಗೆ 9:30 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಪೂಜೆ ಹಾಗೂ ಮಾಲಾರ್ಪಣೆ ಕಾರ್ಯಕ್ರಮ ನಡೆಯಲಿದೆ. ನಂತರ ರಂಗಮಂದಿರದವರೆಗೆ ಮೆರವಣಿಗೆ ಮಾಡಲಾಗುವುದು. ಬೆಳಿಗ್ಗೆ 11ಗಂಟೆಗೆ ಶ್ರೀ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಮತ್ತು ಕುವೆಂಪು ಕನ್ನಡ ಅಧ್ಯಯನದ ನಿರ್ದೇಶಕರಾದ ಡಾ.ಬಿ.ಎಂ.ಪುಟ್ಟಯ್ಯ ಅವರಿಂದ ಉಪನ್ಯಾಸ ಕಾರ್ಯಕ್ರಮವಿದ್ದು, ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು, ಸಮಾಜದ ಎಲ್ಲಾ ಮುಖಂಡರು, ವಿವಿಧ ಸಂಘ– ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತ ಮಕ್ಕಳಿಂದ ತೋಟಗಾರಿಕೆ ತರಬೇತಿಗೆ ಅರ್ಜಿ ಆಹ್ವಾನ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ತೋಟಗಾರಿಕೆ ಇಲಾಖೆಯಿಂದ 2026–27ನೇ ಸಾಲಿಗೆ ಜಿಲ್ಲೆಯ ಆಸಕ್ತಿಯುಳ್ಳ ಅರ್ಹ ರೈತ ಮಕ್ಕಳಿಗೆ ಕೊಪ್ಪಳ ತಾಲ್ಲೂಕಿನ ಮುನಿರಾಬಾದ ತೋಟಗಾರಿಕಾ ತರಬೇತಿ ಕೇಂದ್ರದಲ್ಲಿ 10 ತಿಂಗಳ ತೋಟಗಾ–ರಿಕೆ ತರಬೇತಿ ನಡೆಯಲಿದ್ದು, ಆಸಕ್ತ–ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲರಿಗೆ ಕನಿಷ್ಠ 18 ವರ್ಷ ಮತ್ತು ಗರಿಷ್ಠ 33 ವರ್ಷ, ಮಾಜಿ ಸೈನಿಕರಿಗೆ 33 ರಿಂದ ಗರಿಷ್ಠ 65 ವರ್ಷ ಹಾಗೂ ಇತರರಿಗೆ ಕನಿಷ್ಠ 18 ವರ್ಷ ಮತ್ತು ಗರಿಷ್ಠ 30 ವರ್ಷದ ಅಭ್ಯರ್ಥಿಗಳು ಕನ್ನಡ ವಿಷಯದೊಂದಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ತರಬೇತಿ ಪ್ರವೇಶ ಬಯಸುವ ಅಭ್ಯರ್ಥಿಯ ತಂದೆ / ತಾಯಿ / ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು. ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು.

ಅರ್ಜಿಗಳನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರುರಾಜ್ಯವಲಯ, ರಾಯಚೂರುಕಛೇರಿ ಅಥವಾ ಇಲಾಖೆಯ ವೆಬ್‌ಸೈಟ್ ವಿಳಾಸ: https://horticulturedir.karnataka.gov.in ಮೂಲಕ ಪಡೆದು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಏಪ್ರಿಲ್ 20ರ ಸಂಜೆ 05.30ರೊಳಗಾಗಿ ಈ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ, ರಾಜ್ಯ ವಲಯ, ರಾಯಚೂರಿಗೆ ಕಚೇರಿಯ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ರಾಜ್ಯವಲಯದ ಹಿರಿಯ ಸಹಾಯಕ ತೋಟಗಾ–ರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಐಎಎಸ್ ವರ್ಗಾವಣೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕರ್ನಾಟಕ ರಾಜ್ಯಪಾಲರ ಆದ–ೇಶದ ಮೇರೆಗೆ ಹಾಗೂ ಅವರ ಹೆಸರಿನಲ್ಲಿ ರಾಜ್ಯ ಸರ್ಕಾರ ಹಿರಿಯ ಐಎಎಸ್ ಅಧಿಕಾ–ರಿಗಳ ವರ್ಗಾವಣೆ ಆದೇಶ ಹೊರಡಿಸಿದೆ. ಶ್ರೀ ರಿತ್ವಿಕ್ ರಂಜನಂ ಪಾಂಡೆ, ಐಎಎಸ್ (ಕೆ–ಎನ್:1998) ಅವರು ಆದಾಯ ಇಲಾಖೆ (ವಿಪತ್ತು ನಿರ್ವಹಣೆ, ಮುದ್ರಾಂಕ ಮತ್ತು ನೋಂದಣಿ ಹಾಗೂ ಸಾಮಾಜಿಕ ಭದ್ರತೆ) ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಲಾಗಿದೆ.**



ಮುಂದಿನ ಆದೇಶದವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಅವರು ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹರ್ಷ ಗುಪ್ತ, ಐಎಎಸ್ ಅವರ ಸ್ಥಳಕ್ಕೆ ನಿಯೋಜಿತರಾಗಿದ್ದಾರೆ. ಅದೇ ವೇಳೆ, ಮನೋಜ್ ಕುಮಾರ್ ಮೀನಾ, ಐಎಎಸ್ (ಕೆಎನ್:2003) ಅವರು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕಾರ್ಯದರ್ಶಿ ಹುದ್ದೆಯಿಂದ ವರ್ಗಾವಣೆಯಾಗಿದ್ದು,

ಮುಂದಿನ ಆದೇಶದವರೆಗೆ ಆದಾಯ ಇಲಾಖೆ (ವಿಪತ್ತು ನಿರ್ವಹಣೆ, ಮುದ್ರಾಂಕ ಮತ್ತು ನೋಂದಣಿ ಹಾಗೂ ಸಾಮಾಜಿಕ ಭದ್ರತೆ) ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಇನ್ನೊಂದೆಡೆ, ಸಲ್ಮಾ ಕೆ. ಫಹೀಮ್, ಐಎಎಸ್ (ಕೆಎನ್:2006) ಅವರು ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯಾಗಿ ಮುಂದುವರಿಯುವ ಜೊತೆಗೆ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಜವಾಬ್ದಾರಿ (Concurrent Charge) ವಹಿಸಲು ಸರ್ಕಾರ ಆದೇಶ ನೀಡಿದೆ. ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಈ ಕು–ರಿತು ಅಧಿಕೃತ ಅಧಿಸೂಚನೆ ಪ್ರಕಟಿಸಿದೆ.

# ಹಾವು ಕಡಿತ ಹಾಗೂ ನಾಯಿ ಕಡಿತ ಎರಡನ್ನು ನಿರ್ಲಕ್ಷಿಸದೆ ತಕ್ಷಣವೇ ಹತ್ತಿರದ ಸರಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಹೆಚ್ಚು ಜಾಗೃತಿ ನೀಡಿ:ಡಾ ಸುರೇಂದ್ರಬಾಬು.

ನೈಜ್ಯ ದೆಸೆ ನ್ಯೂಸ್

**ಸಾಕಿದ ಅಥವಾ ಬೀದಿ ನಾಯಿ ಕಚ್ಚಿದರೆ, ಉಗು–ರಿನಿಂದ ಗಿರಿದರೆ ಅಥವಾ ಮೈ ಮೇಲಿರುವ ಗಾಯವನ್ನು ನಾಲಿಗೆಯಿಂದ ನೆಕ್ಕಿದರೆ ಏನೂ ಆಗುವುದಿಲ್ಲವೆಂದು ನಿರ್ಲಕ್ಷಿಸಬೇಡಿ ಎಂದು ಮತ್ತು ಆಕಸ್ಮಿಕವಾಗಿ ಹಾವು ಕಡಿತಕ್ಕೊಳಗಾದ ವ್ಯಕ್ತಿಯನ್ನು ಗಾಬ–ರಿಗೊಳಿಸದೆ ತಕ್ಷಣ ಹತ್ತಿರದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚು ಜಾಗೃತಿ ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ತಿಳಿಸಿದರು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕೃಷ್ಣ ಸಭಾಂಗಣದಲ್ಲಿ ಜಿಲ್ಲೆಯ ತಾಲೂಕಾ ಆರೋಗ್ಯಾಧಿಕಾರಿಗಳು, ಆಡಳಿತ ವೈದ್ಯಾಧಿಕಾರಿಗಳು, ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯವರಿಗೆ ಏರ್ಪಡಿಸಿದ ಸಭೆಯಲ್ಲಿ ಮಾತನಾಡುತ್ತಾ, ಈ ಎರಡು ಪ್ರಾಣಿಗಳ ಕಡಿತವನ್ನು ನಿರ್ಲಕ್ಷಿಸಿದರೆ ಮಾರಣಾಂತಿಕ ವಾಗಬಹುದಾದ್ದು, ಇದಕ್ಕಾಗಿ ನಾಟಿ ವೈದ್ಯರ ಬಳಿ ತೆರಳದೆ ಹತ್ತಿರದ ಸರಕಾರಿ ಆಸ್ಪತೆಯಲ್ಲಿ ಚಿಕಿತ್ಸೆ ಪಡೆಯಲು ಜನತೆ ವ್ಯಾಪಕ ಜಾಗೃತಿ ನೀಡಲು ಸೂಚಿಸಿದರು.

ಹಾವು ಕಚ್ಚಿದಾಗ ವಹಿಸಬೇಕಾದ ಜಾಗೃತಿ.

ಹಾವು ಕಚ್ಚಿದ ವ್ಯಕ್ತಿಯನ್ನು ಗಾಬರಿಯಾಗದಂತೆ ಶಾಂತವಾಗಿ ವರ್ತಿಸಿ ಹತ್ತಿರದ ಆಸ್ಪತ್ರೆಗೆ ತಕ್ಷಣವೇ ಕರೆದುಕೊಂಡು ಬಂದು ಚುಚ್ಚುಮದ್ದು ಕೊಡಿಸಿ ಜೀವ ಹಾನಿಯಾಗದಂತೆ ಮಾಡಬೇಕು.




ವಾಡಿಕೆಯಲ್ಲಿ ಹಾವು ಕಚ್ಚಿದಾಗ ಗಾಬ–ರಿಯಾಗುವುದು ಸಾಮಾನ್ಯವಾಗಿದ್ದು ಇದ–ರಿಂದ ವ್ಯಕ್ತಿಯ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಅದರಲ್ಲೂ ವಿಷಕಾರಿ ಹಾವು ಕಡಿತದ ಸಂದರ್ಭದಲ್ಲಿ ವ್ಯಕ್ತಿಯನ್ನು ಯಾವುದೇ ವಾಹನ ಅಥವಾ 108 ಅಂಬುಲೇನ್ಸ್ ಮೂಲಕ ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಮೊದಲ ಆದ್ಯತೆ ನೀಡಬೇಕು. ಈ ಅವಧಿಯಲ್ಲಿ ರೋಗಿಯನ್ನು ಕೂರಿಸಿ ಹಾವು ಕಚ್ಚಿರುವ ಭಾಗ ಹೃದಯದ ಕೆಳಗೆ ಬರುವ ಹಾಗೆ ಇರಲಿ ರಕ್ತಪ–ರಿಚಲನೆಗೆ ತಡೆಯಾಗುವಂತಹ ಕೈ ಗಡಿಯಾರ, ಬಳೆ, ಉಂಗುರ ಮುಂತಾದವುಗಳನ್ನು ತೆಗೆಯಬೇಕು.

ಕಚ್ಚಿದ ಭಾಗವು ಅಲುಗಾಡದಂತೆ ನೋಡಿಕೊಳ್ಳಿ ಮುಖ್ಯವಾಗಿ ಆಸ್ಪತ್ರೆಗೆ ಹೋಗುವಾಗ ವ್ಯಕ್ತಿಯ ರೋಗ ಲಕ್ಷಣಗಳಾದ ತೇಲುಗಣ್ಣು, ಕಣ್ಣುಮುಚ್ಚುವುದು, ನಾಲಿಗೆ ತೊದಲುವಿಕೆ, ನುಂಗಲು ಕಷ್ಟವಾಗುವುದು, ಉಸಿರಾಡಲು ಕಷ್ಟವಾಗಬಹುದು ಮುಂತಾದವುಗಳನ್ನು ಗಮನಿಸಿ. ಈ ರೀತಿಯಾದಲ್ಲಿ ನರಮಂಡಲಕ್ಕೆ ಹಾನಿ ಮಾಡುವ ವಿಷದ ಅಂಶವಾಗಿರುತ್ತದೆ. ಹಾಗೆಯೇ ಗಾಯದ ಜಾಗದಲ್ಲಿ ತೀವ್ರ ಉರಿ, ನೋವುಹರಡುವಿಕೆ ಅಥವಾ ಊದುವಿಕೆ



ಗಾಯದ ಸುತ್ತ ಬಣ್ಣಹೀನವಾಗುವುದು, ಕೆಳಬೆನ್ನಿನಲ್ಲಿ ನೋವು ಮುಂತಾದ ಲಕ್ಷಣಗಳು ಅಂಗಾಂಗಕ್ಕೆ ಹಾನಿ ಮಾಡುವ ವಿಷದ ಅಂಶವಾಗಿರುತ್ತದೆ. ದಯವಿಟ್ಟು ಈ ಲಕ್ಷಣಗಳ ಬಗ್ಗೆ ಹೆಚ್ಚು ಮಾಹಿತಿ ನೀಡಬೇಕು.

ನಾಯಿ ಕಡಿತ ಕುರಿತು ಜಾಗೃತಿ

ನಾಯಿ ಕಡಿತದಲ್ಲಿ ವಿಶೇಷವಾಗಿ ರೇಬೀಸ್ ಸೋಂಕುವುಳ್ಳ ನಾಯಿ ಕಚ್ಚುವಿಕೆಯಿಂದ ವ್ಯಕ್ತಿಗೆ ರೇಬೀಸ್ ಕಾಯಲೆ ಬಂದಾಗ ಕ್ರಮೇಣ ನೀರು ಕುಡಿಯುವುದಿಲ್ಲ, ಗಾಳಿ ಬಿಸಿದರೆ ಹೆದರುತ್ತಾರೆ, ಬೆಳಕು ಕಂಡರೆ ಭಯ ಪಡುತ್ತಾರೆ, ರೋಗ ದೀರ್ಘವಾದಾಗ ಮರಣ ಸಂಭವಿಸಬಹುದು. ಅಲ್ಲದೆ ನಾಯಿ ಕಡಿತ ಮೆದುಳಿಗೆ (ತಲೆಗೆ) ಹತ್ತಿರವಾಗಿದ್ದಲ್ಲಿ ಅಪಾಯ ಹೆಚ್ಚು. ಸಾಕಿದ ಅಥವಾ ಬೀದಿ ನಾಯಿ ಕಚ್ಚಿದರೆ, ಉಗುರಿನಿಂದ ಗಿರಿದರೆ, ಅಥವಾ ನಮ್ಮ ಮೈ ಮೇಲಿರುವ ಈಗಾಗಲೆ ಇರುವ ಗಾಯವನ್ನು ನಾಲಿಗೆಯಿಂದ ನೆಕ್ಕಿದರೆ ಏನೂ ಆಗುವುದಿಲ್ಲವೆಂದು ನಿರ್ಲಕ್ಷ್ಯದರೆ ಅಪಾಯ ಹೆಚ್ಚು. ಈ ರೀತಿ ಮಾಡದೆ ನಾಯಿ ಕಚ್ಚಿದ ಜಾಗವನ್ನು ಸೋಪು ಮತ್ತು ನೀರಿನಿಂದ ತೊಳೆದು ಹತ್ತಿರದ ಆಸ್ಪತ್ರೆಗೆ ತೆರಳಿ ವೈದ್ಯರ ಸಲಹೆಯಂತೆ ಮಾರಣಾಂತಿಕವಾದ ರೇಬಿಸ್ ರೋಗ ತಡೆಗಟ್ಟುವ ಇಂಜಕ್ಷನ್ ಪಡೆಯಲು ತಿಳಿಸಬೇಕಿದೆ.

ಮಾರಣಾಂತಿಕ ರೇಬೀಸ್ ಕಾಯಿಲೆಯನ್ನು ತಡೆಗಟ್ಟಬಹುದಾಗಿದ್ದು, ಕಚ್ಚಿದ ಜಾಗವನ್ನು ಸ್ವಚ್ಛವಾಗಿ–ತೊಳೆದು ತಕ್ಷಣವೇ ರೇಬಿಸ್ ಚುಚ್ಚುಮದ್ದನ್ನು ವೈದ್ಯರ ಸಲಹೆಯಂತೆ ಕಚ್ಚಿದ ಮೊದಲ ದಿನ, 3ನೇ ದಿನ, 7ನೇ ದಿನ,14 ನೇಯ ದಿನ ಹಾಗೂ 28 ದಿನ ತಪ್ಪದೆ ಲಸಿಕೆ ಪಡೆಯಲು ಜನತೆಗೆ ಹೆಚ್ಚು ಜಾಗೃತಿ ನೀಡಲು ತಿಳಿಸಿದರು. ಅಲ್ಲದೆ ಜಿಲ್ಲೆಯ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿತ ಮತ್ತು ನಾಯಿ ಕಡಿತಕ್ಕೆ ಔಷಧಿ ಲಭ್ಯವಿರುವ ಬಗ್ಗೆ ಜನತೆಗೆ ಜಾಗೃತಿ ನೀಡಲು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್, ಜಿಲ್ಲಾ ಸರ್ವೆಕ್ಷಣಾಧಿಕಾರಿ ಹಾಗೂ ಡಿಎಮ್‌ಓ ಡಾ ಗಣೇಶ ಕೆ, ಜಿಲ್ಲಾ ಎನ್‌ಪೋರ್ಸ್‌ಮೆಂಟ್ ಅಧಿಕಾರಿ ಡಾ ಶಿವಕುಮಾರ್ ನಾರಾ, ಡಿಪಿಡಿಓ ಡಾ ಚಂದ್ರಶೇಖಯ್ಯ ಸ್ವಾಮಿ ಸೇರಿದಂತೆ ವೈದ್ಯಾಧಿಕಾರಿಗಳು, ಜಿಲ್ಲಾ ಮಟ್ಟದ ಸಲಹೆಗಾರರು, ಸಂಯೋಜಕರು, ಆರೋಗ್ಯ ಶಿಕ್ಷಣಾಧಿಕಾರಿಗಳು, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಬಿಪಿಎಮ್, ಸೇರಿದಂತೆ ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಟೆಕ್ ಟೆಕ್ಸ್ಟೈಲ್ ಟೆಕ್ನಾಲಜಿ

ಬಿ.ಟೆಕ್ ಟೆಕ್ಸ್ಟೈಲ್ ಟೆಕ್ನಾಲಜಿ (B.Tech Textile Technology) ಕೋರ್ಸ್‌ವು ತಂತುಗಳಿಂದ (Fibres) ಪ್ರಾರಂಭವಾಗಿ ವಸ್ತ್ರ ಮತ್ತು ಉಡುಪುಗಳ ಅಂತಿಮ ಉತ್ಪನ್ನಗಳವರೆಗೆ ನಡೆಯುವ ಸಂಪೂರ್ಣ ತಯಾರಿಕಾ ಪ್ರಕ್ರಿಯೆಗಳ ವೈಜ್ಞಾನಿಕ, ತಾಂತ್ರಿಕ ಮತ್ತು ಇಂಜಿನಿಯರಿಂಗ್ ಅಧ್ಯಯನವನ್ನು ಒಳಗೊಂಡಿರುತ್ತದೆ. ಈ ಕೋರ್ಸ್‌ನಲ್ಲಿ ತಂತು ಉತ್ಪಾದನೆ, ಸೂತು (Yarn) ನಿರ್ಮಾಣ, ನೂಲಿನ ರಚನೆ, ಬಟ್ಟೆ ತಯಾರಿಕೆ, ಬಣ್ಣಿಸುವಿಕೆ, ಮುದ್ರಣ ಮತ್ತು ಫಿನಿಷಿಂಗ್ ಪ್ರಕ್ರಿಯೆಗಳ ಬಗ್ಗೆ ಸಿದ್ಧಾಂತ ಹಾಗೂ ಪ್ರಾಯೋಗಿಕ ಜ್ಞಾನವನ್ನು ನೀಡಲಾಗುತ್ತದೆ. ಮುಖ್ಯ ಅಧ್ಯಯನ ವಿಷಯಗಳು ತಂತು ವಿಜ್ಞಾನ (Fibre Science) ಸ್ಪಿನ್ನಿಂಗ್ ತಂತ್ರಜ್ಞಾನ (Spinning Technology) ವೀವಿಂಗ್ ಮತ್ತು ನಿಟಿಂಗ್ ತಂತ್ರಜ್ಞಾನ (Weaving & Knitting Technology) ಡೈಯಿಂಗ್ ಮತ್ತು ಪ್ರಿಂಟಿಂಗ್ (Dyeing & Printing) ಟೆಕ್ಸ್ಟೈಲ್ ಕೆಮಿಸ್ಟ್ರಿ ವೆಟ್ ಪ್ರೊಸೆಸ್ ಎಂಜಿನಿಯರಿಂಗ್ ಗಾರ್ಮೆಂಟ್ ಉತ್ಪಾದನೆ ತಂತ್ರಜ್ಞಾನ ಕಾರ್ಖಾನೆ ಯೋಜನೆ ಮತ್ತು ನಿರ್ವಹಣೆ ಗುಣಮಟ್ಟ ನಿಯಂತ್ರಣ (Quality Control) ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ ತಾಂತ್ರಿಕ ಕೌಶಲ್ಯಗಳು ಯಂತ್ರೋಪಕರಣಗಳ ವಿನ್ಯಾಸ ಮತ್ತು ನಿರ್ವಹಣೆ ಉತ್ಪಾದನಾ ಯೋಜನೆ ಮತ್ತು ನಿಯಂತ್ರಣ ಕೈಗಾರಿಕಾ ಸುರಕ್ಷತೆ ಮತ್ತು ಆರೋಗ್ಯ ನಿರ್ವಹಣೆ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ ಪರಿಸರ ಸ್ನೇಹಿ ಉತ್ಪಾದನಾ ವಿಧಾನಗಳು ಬಿ.ಟೆಕ್ ಟೆಕ್ಸ್ಟೈಲ್ ಟೆಕ್ನಾಲಜಿ ಕೋರ್ಸ್‌ಗೆ ಪ್ರವೇಶ ಪಡೆಯಲು ಕೆಳಗಿನ ಅರ್ಹತೆಗಳು ಅಗತ್ಯ: ಶೈಕ್ಷಣಿಕ ಅರ್ಹತೆ ಪಿಯುಸಿ / 12ನೇ ತರಗತಿ (Science Stream) ಉತ್ತೀರ್ಣರಾಗಿರಬೇಕು. ಕಡ್ಡಾಯ ವಿಷಯಗಳು: ಭೌತಶಾಸ್ತ್ರ (Physics) ರಸಾಯನಶಾಸ್ತ್ರ (Chemistry) ಗಣಿತ (Mathematics) ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಯ ಮೂಲಕ: KCET (ಕರ್ನಾಟಕ ಕಾಮನ್ ಎಂಟ್ರನ್ಸ್ ಟೆಸ್ಟ್) JEE Main ಅಥವಾ ವಿಶ್ವವಿದ್ಯಾಲಯ / ಖಾಸಗಿ ಕಾಲೇಜು ಪ್ರವೇಶ ಪ್ರಕ್ರಿಯೆ ಕೋರ್ಸ್ ಉದ್ದೇಶ ವಿದ್ಯಾರ್ಥಿಗಳಿಗೆ ಟೆಕ್ಸ್ಟೈಲ್ ಉದ್ಯಮದಲ್ಲಿ ಉತ್ಪನ್ನ ಅಭಿವೃದ್ಧಿ, ಕೈಗಾರಿಕಾ ವಿನ್ಯಾಸ, ಉತ್ಪಾದನಾ ನಿರ್ವಹಣೆ, ನವೀನ ತಂತ್ರಜ್ಞಾನ ಮತ್ತು ಜಾಗತಿಕ ಮಾರುಕಟ್ಟೆ ವ್ಯವಸ್ಥೆಗಳ ಕುರಿತು ಸಮಗ್ರ ಜ್ಞಾನ ನೀಡುವುದು. ಉದ್ಯೋಗ ಅವಕಾಶಗಳು ಟೆಕ್ಸ್ಟೈಲ್ ಮಿಲ್ಸ್ ಗಾರ್ಮೆಂಟ್ ಇಂಡಸ್ಟ್ರಿ ಫ್ಯಾಷನ್ ಮತ್ತು ಅಪ್ಯಾರಲ್ ಕಂಪನಿಗಳು ಟೆಕ್ಸ್ಟೈಲ್ ರಿಸರ್ಚ್ ಸಂಸ್ಥೆಗಳು ಡೈಯಿಂಗ್ ಮತ್ತು ಪ್ರಿಂಟಿಂಗ್ ಘಟಕಗಳು ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳು ರಫ್ತು ಮತ್ತು ಮಾರುಕಟ್ಟೆ ಸಂಸ್ಥೆಗಳು ಭವಿಷ್ಯದ ಅವಕಾಶಗಳು ಟೆಕ್ಸ್ಟೈಲ್ ಕ್ಷೇತ್ರವು ಭಾರತದಲ್ಲಿ ದೊಡ್ಡ ಉದ್ಯೋಗಾವಕಾಶಗಳನ್ನು ನೀಡುವ ಪ್ರಮುಖ ಕೈಗಾರಿಕಾ ಕ್ಷೇತ್ರವಾಗಿದ್ದು, ದೇಶೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ವೃತ್ತಿ ಅವಕಾಶಗಳನ್ನು ಒದಗಿಸುತ್ತದೆ.




### ಏಪ್ರಿಲ್ 17ರಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಏಪ್ರಿಲ್ 17ರ ಬೆಳಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 01 ಗಂಟೆವರೆಗೆ ನೇರ ಸಂದರ್ಶನ ಆಯೋಜಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಕೋರಲಾಗಿದೆ. ನೇರ ಸಂದರ್ಶನದಲ್ಲಿ ಎರಡು ಖಾಸಗಿ ಕಂಪನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ.**


ಅರ್ಹತೆಗಳು: ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಎಲ್ಲಾ ಪದವೀಧರ ಆಸಕ್ತ 18 ರಿಂದ 30 ವರ್ಷಗಳ ವರೆಗಿನ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ. ವಿದ್ಯಾರ್ಹತೆಯ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ತಮ್ಮ ಬಯೋಡೆಟಾ, ಆಧಾರ್ ಕಾರ್ಡ್ ಪ್ರತಿ, ಭಾವಚಿತ್ರಗನ್ನು ಸಲ್ಲಿಸಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ, ಬದಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಾಲಾಜಿ ಕಾಂಪ್ಲೆಕ್ಸ್, ನೆಲ ಮಹಡಿ, ಗೂಡ್ ಶೆಡ್ ರಸ್ತೆ, ಸ್ಟೇಷನ್ ಏರಿಯಾ, ರಾಯಚೂರು ಹಾಗೂ ದೂರವಾಣಿ ಸಂಖ್ಯೆ 08532-231684, 9916931616, 9008211750 ಅಥವಾ 8197930236 ಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ನವೀನ ಕುಮಾರ್ ಸಂಗೇಪಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುಲ್ಕಿ ಸಮೀಪ ನಡುಗೋಡು-ಕಿಳೆಂಜೂರು ಪ್ರದೇಶದಲ್ಲಿ ತೀವ್ರ ನೆಟ್ವರ್ಕ್ ಸಮಸ್ಯೆ ಟವರ್ ನಿರ್ಮಾಣಕ್ಕೆ ಆಗ್ರಹ

ನೈಜ್ಯ ದೆಸೆ ನ್ಯೂಸ್

**ಮುಲ್ಕಿ: ಮಂಗಳೂರು ಸಮೀಪದ ಮುಲ್ಕಿ ಭಾಗದ ನಡುಗೋಡು, ಕಿಳೆಂಜೂರು ಬಲವಿನ ಗುಡ್ಡೆ ಪ್ರದೇಶದಲ್ಲಿ ಮೊಬೈಲ್ ನೆಟ್ವರ್ಕ್ ಸಮಸ್ಯೆ ದಿನೇದಿನೇ ಹೆಚ್ಚುತ್ತಿದ್ದು, ಸ್ಥಳೀಯರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.**

ಈ ಪ್ರದೇಶದಲ್ಲಿ ದೂರವಾಣಿ ಕರೆಗಳು ಸರಿಯಾಗಿ ಸಂಪರ್ಕವಾಗದೆ, "ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ" ಎಂಬ ಸಂದೇಶವೇ ಹೆಚ್ಚಾಗಿ ಕೇಳಿಬರುತ್ತಿದೆ. ತುರ್ತು ಪರಿಸ್ಥಿತಿಗಳಲ್ಲಿಯೂ ಸಹ ಕರೆ ಮಾಡಲಾಗದೇ



ಜನರು ಆತಂಕಕ್ಕೆ ಒಳಗಾಗುತ್ತಿದ್ದಾರೆ. ಯಾವುದೇ ಅನಾಹುತ ಸಂಭವಿಸಿದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಲು ಅಥವಾ ಫೋಟೋ, ವಿಡಿಯೋಗಳನ್ನು ಕಳುಹಿಸಲು ಸಾಧ್ಯವಾಗುತ್ತಿಲ್ಲ, ಏಕೆಂದರೆ ಡಾಟಾ ಸೇವೆಯೂ ಸಮರ್ಪಕವಾಗಿ ಲಭ್ಯವಿಲ್ಲ.

ವಿವಿಧ ದೂರವಾಣಿ ಕಂಪನಿಗಳು ಉತ್ತಮ ಸೇವೆಯ ಬಗ್ಗೆ ಜಾಹೀರಾತು ನೀಡುತ್ತಿದ್ದರೂ, ಈ ಪ್ರದೇಶದಲ್ಲಿ ಮೂಲಭೂತ ಸಂಪರ್ಕವೇ ದೊರೆಯದಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ. ಕಂಪನಿಗಳಿಂದ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂಬ ಆರೋಪವೂ ಕೇಳಿಬರುತ್ತಿದೆ. ನೆಟ್ವರ್ಕ್ ಸಮಸ್ಯೆಯಿಂದ ಮನೆಮಧ್ಯೆ ಕೆಲಸ ಮಾಡುವ ಉದ್ಯೋಗಿಗಳು ಹಾಗೂ ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ. ಆನ್‌ಲೈನ್ ಕೆಲಸಗಳು, ತರಗತಿಗಳು ನಡೆಸಲು ಸಾಧ್ಯವಾಗದೇ ದಿನನಿತ್ಯದ ಕಾರ್ಯಗಳಲ್ಲಿ ವ್ಯತ್ಯಯ ಉಂಟಾಗಿದೆ. ಹೀಗಾಗಿ, ಸಂಬಂಧಿತ ಮೊಬೈಲ್ ಕಂಪನಿಗಳು ತಕ್ಷಣ ಸಮಸ್ಯೆ ಪರಿಹರಿಸಿ, ಈ ಪ್ರದೇಶದಲ್ಲಿ ಹೊಸ ಮೊಬೈಲ್ ಟವರ್ ನಿರ್ಮಿಸಿ ಉತ್ತಮ ಸಂಪರ್ಕ ವ್ಯವಸ್ಥೆ ಕಲ್ಪಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ: ಪ್ರಾಚಾರ್ಯ ಕಿಶೋರ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಎಸ್ ಕೆ ಶಿಕ್ಷಣ ಮಹಾವಿದ್ಯಾಲಯದಿಂದ ಸ್ಥಳೀಯ ಆಶ್ರಯ ಕಾಲೊನಿಯಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆ (NSS) ವಿಶೇಷ ಶಿಬಿರವು ನಾಲ್ಕನೇ ದಿನ ಗುರುವಾರ ಸಂಭ್ರಮದಿಂದ ಆರಂಭಗೊಂಡಿತು. ಶಿಬಿರದ ಅಂಗವಾಗಿ ಮುಂಜಾನೆ ಎನ್. ಎಸ್.ಎಸ್ ಗೀತೆಯ ಗಾಯನ ಹಾಗೂ ಯೋಗಾಭ್ಯಾಸ ನಡೆಸಲಾಯಿತು.**

ಬಳಿಕ ವಿದ್ಯಾರ್ಥಿಗಳು ನಗರದ ಆಶ್ರಯ ಕಾಲೋನಿ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುವ ಮೂಲಕ ಶ್ರಮದಾನದಲ್ಲಿ ತೊಡಗಿಸಿಕೊಂಡರು. ಶಿಬಿರದ ನಾಲ್ಕನೇ ದಿನದ ಮೂರನೇ ಉಪನ್ಯಾಸ ಮಾಲಿಕೆಯಲ್ಲಿ "ನಿತ್ಯ ಜೀವನದಲ್ಲಿ ಪರಿಸರ" ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಮುಖ್ಯ ಉಪನ್ಯಾಸಕರಾದ




ಎಸ್ ಕೆ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಕಿಶೋರ್ ಕುಮಾರ್ ಅವರು ಮಾತನಾಡಿ ಮಹಾವಿದ್ಯಾಲಯದ ಎನ್-ಎಸ್‌ಎಸ್ ಘಟಕ ಒಂದು ಸುಂದರ ಪರಿಸರ ಇದ್ದಂತೆ ಅದು ಒಬ್ಬರ ಮೇಲೆ ಒಂದೊಂದು ರೀತಿಯ ಪ್ರಭಾವವನ್ನು ಬೀರುತ್ತದೆ ಪ್ರಕೃತಿಯು ಶಿಕ್ಷಕನಿದ್ದಂತೆ ಅದು ನಮ್ಮೆಲ್ಲರನ್ನ ಅಪ್ಪಿಕೊಂಡು ಸಮನಾಗಿ ಕಾಣುತ್ತದೆ ಪರಿಸರವನ್ನು ಹಾಳು ಮಾಡದೆ ಅದನ್ನು ಸಂರಕ್ಷಿಸಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಕೆ. ಸಿ. ಸಜ್ಜನ ನಿರ್ದೇಶಕರು ವೀ.ವಿ .ಸಂಘ ತಾಳಿಕೋಟಿ ಅವರು ಮಾತನಾಡಿ ಪರಿಸರನಾಶವು ನಮ್ಮ ಜೀವನಕ್ಕೆ ಅಪಾಯಕಾರಿಯಾಗಿದ್ದು ಪ್ರಶಿಕ್ಷಣಾರ್ಥಿಗಳು ನಿತ್ಯ ಜೀವನದಲ್ಲಿ ಪರಿಸರ ಕಾಪಾಡಿಕೊಳ್ಳಬೇಕೆಂದು ಹೇಳಿದರು. ಕಾರ್ಯಕ್ರಮದ ಮಾರ್ಗದರ್ಶಕರಾದ ಸುರೇಶ ಬಡಿಗೇರ ಅವರು ಭವಿಷ್ಯದ ದಿನಮಾನಗಳಲ್ಲಿ ಪರಿಸರ ನಾಶದಿಂದ ಸದೃಢ ಜೀವನ ಸಾಧ್ಯವಿಲ್ಲ ಆದ್ದರಿಂದ ಪ್ರತಿ ನಾಗರಿಕರು ಮರ ಬೆಳೆಸುವ ಮೂಲಕ ಪರಿಸರ ರಕ್ಷಣೆ ಮತ್ತು ಪಾಲನೆ ಪ್ರತಿ ಮನುಷ್ಯನ ಕರ್ತವ್ಯವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಆರ್.ಎಂ. ಬಂಟನೂರ ಅವರು ಮಾತನಾಡಿ, ಭವಿಷ್ಯತ್ತಿನ ದಿನಮಾನಗಳಲ್ಲಿ ಪರಿಸರ ಉತ್ತಮ ಮಾಡಬೇಕಾದರೆ ಇಂದು ನಾವೆಲ್ಲ ಪರಿಸರದ ಬಗ್ಗೆ ಕಾಳಜಿ ವಹಿಸಬೇಕು ಪರಿಸರ ಸಂರಕ್ಷಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಇತರ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕೆಂದು ಪ್ರಶಿಕ್ಷಣಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಸ್ಥಳೀಯ ವೀ.ವಿ.ಸಂಘದ ವೈಸ ಚೇರಮನ್ನರು ಹಾಗೂ ಎಸ್. ಕೆ. ಶಿಕ್ಷಣ ಮಹಾವಿದ್ಯಾಲಯದ ಚೇರಮನ್ನರಾದ ಕೆ.ಎಸ್ ಮುರಾಳ ಮತ್ತು ಕಾರ್ಯದರ್ಶಿಗಳಾದ ಎಂ.ಎಸ್. ಸರಶೆಟ್ಟಿ ಉಪಸ್ಥಿತರಿದ್ದರು. ಪ್ರಶಿಕ್ಷಣಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಜಯಶ್ರೀ ಮತ್ತು ತಂಡ ಪ್ರಾಥ-ರ್ನೆ ನೆರವೇರಿಸಿದರು. ಕಲ್ಪನಾ ತಂಡ ಎನ್. ಎಸ್.ಎಸ್ ಗೀತೆಯನ್ನು ಹಾಡಿದರು. ನಕ್ಷತ್ರ ಅಚನೂರು ಸ್ವಾಗತಿಸಿ ಪರಿಚಯಿಸಿದರು. ಸೌಜನ್ಯ ಪುಷ್ಪಾರ್ಪಣೆ ನೆರವೇರಿಸಿದರು. ಮಲ್ಲಿಕಾರ್ಜುನ ವಂದನಾರ್ಪಣೆ ಸಲ್ಲಿಸಿದರು. ಕೀರ್ತಿ ಹಂದ್ರಾಳ ಕಾರ್ಯಕ್ರಮ ನಿರೂಪಿಸಿದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿಗಳಾದ ಎ.ಎ. ಗಂಗನಗೌಡರ, ಕಾರ್ಯದರ್ಶಿಗಳಾದ ರೇಷ್ಮಾ ಚಲವಾದಿ, ಪ್ರಥಮ ವರ್ಷದ ವರ್ಗ ಪ್ರತಿನಿಧಿ ಯಮನಪ್ಪ ಹಾಗೂ ಎನ್.ಎಸ್.ಎಸ್ ಶಿಬಿರಾರ್ಥಿಗಳು ಮತ್ತು ಮಹಾವಿದ್ಯಾಲಯದ ಸರ್ವ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.